ಅಪರಂಜಿ


ನವೆಂಬರ್
1990

ತಿಳಿನಗೆಯ ಕಾರಂಜಿ



- ಪ್ರಕಾಶ್
- ನಾ. ಡಿಸೋಜ
- ಆನಂದ
- ಹಾ. ಮ್ಯಾ. ಸೂರಿ
- ಶಿವರಾಮ ಕಾರಂತ
- ಸ. ನ. ಅಶೋಕ
- ಶಿವು
- ಗುಂಡ
- ಸೀನ
- ಸಾವಿತ್ರಿ
- ಅ. ರಾ. ಸೇ.
- ಹಾ. ಮ್ಯಾ. ಸೂರಿ
- ಅ. ರಾ. ಸೇ.

ಬಿಡಿ ಪ್ರತಿ : 2 ರೂ. 50 ಪೈ.



(ತಿಳಿ ನಗೆಯ ಕಾರಂಜಿ)

ಸಂಪುಟ ೮ ನವೆಂಬರ್ ೧೯೯೦ ಸಂಚಿಕೆ-೨

ಶ್ರದ್ಧಾಂಜಲಿ

ವಿಜ್ಞಾನ ಅದರಲ್ಲೂ ಭೌತ ಶಾಸ್ತ್ರ ಮತ್ತು ಹಾಸ್ಯ ಅಷ್ಟೇನು ಸುಲಭವಾಗಿ ಬೆರೆಯುವ ವಸ್ತುಗಳಲ್ಲ. ಅಮೆರಿಕದ ಭೌತ ವಿಜ್ಞಾನಿ, ನೊಬೆಲ್ ಪ್ರಶಸ್ತಿ ವಿಜೇತ ರಿಚರ್ಡ್ ಫೇನ್‌ಮನ್ ಅಂತಹ ಒಬ್ಬ ವ್ಯಕ್ತಿಯಾಗಿದ್ದರ ಆತನ ಸುಪ್ರಸಿದ್ಧ ಪುಸ್ತಕ "Surely you're joking, Mr. Feynman"ವನ್ನು ಅಪರಂಜಿಗೆ ಪರಿಚಯಿಸಿದ ರಮೇಶ್ ಅಂತಹ ಇನ್ನೊಂದು ಸಹೃದಯ ಜೀವ. ಭೆಟ್ಟಿಯಾದಾಗಲೆಲ್ಲಾ ಲಕ್ಷಗಟ್ಟಲೆ ಬೆಳಕಿನ ವರ್ಷಗಳಷ್ಟು ದೂರವಿರುವ ಕಪ್ಪು ಅಂತರಾಳ (Black holes) ಗಳ ಬಗ್ಗೆ ಅತಿ ಸ್ವಾರಸ್ಯಕರವಾದ ಶಾಸ್ತ್ರ ಕಥೆಗಳನ್ನು ಹೇಳುತ್ತ, ಅದರೊಂದಿಗೆ ನಗೆ ಬುಗ್ಗೆಗಳನ್ನು ಚಿಮ್ಮಿಸುತ್ತಿದ್ದ ರಮೇಶ ಮೊನ್ನೆ ತಾನೆ ನಗು ನಗುತ್ತಲೇ ನಮ್ಮಿಂದ ಕಣ್ಮರೆಯಾಗಿದ್ದಾನೆ. ಈಗ ಆತ ಯಾವ ನೀಹಾರಿಕೆಯಲ್ಲೇ ಇರಲಿ ಅಲ್ಲಿನ ಜೀವಿಗಳನ್ನು ಸದಾ ನಗಿಸುತ್ತಿರಲಿ ಎಂದು ಅಪರಂಜಿ ಹಾರೈಸುತ್ತಾಳೆ.

ಗೌರವ ಸಲಹೆಗಾರರು : ಶ್ರೀ ಅ. ರಾ. ಸೇ. ಶ್ರೀ ಶೇಷಗಿರಿ ಸಂಪಾದಕ : **ಶಿವಕುಮಾರ್**	ಚಂದಾ ವಿವರ ಬಿಡಿ ಪ್ರತಿ 2 ರೂ. 50 ಪೈ. ವಾರ್ಷಿಕ ಚಂದಾ 25 ರೂ. ಆಜೀವ ಚಂದಾ 250 ರೂ.	ವಿಳಾಸ ಅಪರಂಜಿ ಕಾರ್ಯಾಲಯ 36, 6ನೆಯ ಮುಖ್ಯ ರಸ್ತೆ ಮಲ್ಲೇಶ್ವರಂ ಬೆಂಗಳೂರು 560003 ಕೆಲಸದ ವೇಳೆ ಬೆಳಗ್ಗೆ 8ರಿಂದ 10ರವರೆಗೆ ಮಾತ್ರ

ಈ ಸಂಚಿಕೆಯಲ್ಲಿ

ಮುದ್ರಣ : ಇಂಪ್ರೆಷನ್ಸ್, ಮಲ್ಲೇಶ್ವರಂ, ಬೆಂಗಳೂರು

ದೂರವಾಣಿ : 342144

ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ ೮ ನವೆಂಬರ್ ೧೯೯೦ ಸಂಚಿಕೆ ೨

ಮಾತನ್ನೇ ಜಿಜ್ಞಾಸೆ ಮಾಡಬಾರದು. ಮಾತಾಡುವವನನ್ನು ಅರಿತುಕೊಳ್ಳಬೇಕು.


—ಕೌಷೀತಕಿ.

ಪ್ರತ್ಯಗಾತ್ಮನನ್ನರಿತರೆ ವಾಕ್ಕನ್ನರಿತಂತೇ. ಆ ಪ್ರಜ್ಞಾತ್ಮನು ಆನಂದ, ಅಜರ, ಅಮರ ಎಂದು ಉಪನಿಷತ್ತು ತಿಳಿಸಿಕೊಡುತ್ತದೆ.

ಭಾರತ ಸ್ವತಂತ್ರವಾಗಿ, ನಮ್ಮ ಮೇಲೆ ನಮ್ಮ ಶ್ರೀ ಅಸಾಮಾನ್ಯರ ಆಡಳಿತ ಆರಂಭವಾದ ಮೇಲೆ ಎಷ್ಟೊಂದು ಮಾತುಗಳು! ಸತ್ಯ, ಅಹಿಂಸೆ, ಶಾಂತಿ, ಸಮಾನತೆ, ಭಾವೈಕ್ಯ, ಸಾಮಾಜಿಕ ನ್ಯಾಯ....ಒಂದೇ, ಎರಡೇ? ಪರರ ನೋವಿಗೆ ಸ್ಪಂದನ! ಮಾನವೀಯತೆ!!

ಇವನ್ನೇ ವಿಚಾರ ಮಾಡಿ ನೂರಾರು, ಸಾವಿರಾರು ಗ್ರಂಥಗಳನ್ನು ಬರೆದೂ ಬಿಟ್ಟಿದ್ದಾರೆ. ಹೀಗಿದ್ದರೂ ಇವು ಯಾವೂ ಏಕೆ ಸಾಧಿತವಾಗಿಲ್ಲ?

ಈ ಮಾತುಗಳನ್ನಾಡುವವರು ಯಾರು; ಅವರ ಹಿನ್ನೆಲೆ ಏನು ಎಂದು ತಿಳಿದುಕೊಳ್ಳಬೇಕು. ಆಗ ಯಾವ ಪ್ರಶ್ನೆಯೂ ಉದ್ಭವಿಸುವುದಿಲ್ಲ.



—ಪ್ರಕಾಶ್

ಸೀಮಿತ ವಿದ್ಯುತ್ ; ಒಳಕೆ ಉದ್ಯಮಗಳಿಗೆ ಸೂಚನೆ.

—ಸುದ್ದಿ.

ಈಗ ಮಾಡುತ್ತಿರುವುದೇನು ಮತ್ತೆ?

* * * *

ಬಿ. ಡಿ. ಎ. ಮಹಿಳಾ ಅಧಿಕಾರಿ ಲೋಕಾಯುಕ್ತ ಬಲೆಗೆ.

—ಸುದ್ದಿ.

ತೊಟ್ಟಿಲು ತೂಗುವ ಕೈ ಲಂಚ ಸ್ವೀಕರಿಸದೆ?

* * * *

ವಿದ್ಯುತ್ ಹೊಸ ನೀತಿ ; ಶೀಘ್ರವೇ ಪ್ರಕಟಣೆ.

—ಪತ್ರಿಕೆ.

ಕತ್ತಲೆಯಲ್ಲಿ ಪ್ರಕಟಣೆ ಹೇಗೆ ಓದುವುದು?

* * *

ಜೋಗ್ ಜಲಧಾರೆಯಲ್ಲಿ ಸಿಡಿದ ಬಣ್ಣದ ಚಿತ್ತಾರ ; ರಾಷ್ಟ್ರಪತಿ ಸಂತಸ.

—ಸುದ್ದಿ.

ಮಂಡಲ್ ವರದಿಯ ದಳ್ಳುರಿಯಿಂದ ಅವರಿಗೆ ವಿಶ್ರಾಂತಿ?

* * * *

ಸಂಜಯ್ ಖಾನ್ ಹೊಸ ಧಾರಾವಾಹಿ 'ಹನುಮಾನ್.'

—ಪತ್ರಿಕೆ.

ರಿಟ್ ಹಾಕುವವರೆಲ್ಲ ಸಿದ್ಧರಾಗುತ್ತಿದ್ದಾರೇನೋ?

* * * *

ಮಂಡಲ್ ವರದಿ ಕೆಂಡಾಮಂಡಲವಾಗುತ್ತೆ ಅಂತ ಯಾರೂ ನಿರೀಕ್ಷಿಸಿರಲಿಲ್ಲ !

* * * *

ಪಿ. ಟಿ. ಉಷಾ ನಿವೃತ್ತಿ : ಮದುವೆ ಯೋಚನೆ.

—ಪತ್ರಿಕೆ.

ಕೊನೆಯು ಚಿನ್ನ ಕೊರಳಿಗೆ ಬೀಳುವುದು ಖಂಡಿತ!

* * * *

ಅಪಾತ್ರರಿಗೆ ಉದ್ಯೋಗ ದೊರಕಿಸಲು ಯೋಗ್ಯತೆ ಇದ್ದವರನ್ನು ವಂಚಿಸಬೇಡಿ.

—ಶ್ರೀ ಟಾಟಾ.

ಅರಣ್ಯರೋದನ ಅಂದರೆ ಇದೇ!

* * * *

ಈ ಮಂಡಲ್ ಗಲಾಟೇ ಕಾಲದಲ್ಲಿ ಕಿಡಿ ಹಾರಿಸಂಕ್ಕೇ ಭಯ ಆಗುತ್ತೆ!

ಮಿನಿ ಕತೆ

ಗುರು ಶಿಷ್ಯರು

—ನಾ. ಡಿಸೋಜ

ನಾಯಕ ಒಂಟಿ ಹೆಣ್ಣನ್ನು ಕೆಣಕಲು ಬಂದ ಒಂದು ಡಜನ್ ಗೂಂಡಾಗಳನ್ನು ಏಕೈಕಿಯಾಗಿ ನಿಂತು ಸದೆಬಡಿದ. ಕೆಲವರ ಕಾಲು ಮುರಿದು, ಕೆಲವರ ಕೈ ತಿರುಚಿ, ಕೆಲವರ ಹಲ್ಲು ಉದುರಿಸಿ, ಉಳಿದವರ ತುಟಿ ಹರಿದು, ಅವರೆಲ್ಲ ಅಯ್ಯೊಯ್ಯೋ ಎಂದು ಓಡತೊಡಗಿದಾಗ, ಚಲನಚಿತ್ರ ಮಂದಿರದ ತುಂಬ ಕಿಕ್ಕಿರಿದ ಅಭಿಮಾನಿ ಜನ ಸಿಳ್ಳೆ ಹೊಡೆದರು. ಚಪ್ಪಾಳೆ ತಟ್ಟಿದರು. ಕೇಕೆ ಹಾಕಿದರು. ಕುಳಿತಲ್ಲಿ ಕುಣಿದರು. ಕುಪ್ಪಳಿಸಿದರು.

ಬಡ ಜನರಿಂದ ಅದೂ ಬೀದಿಯ ಚಿಲ್ಲರೆ ಮಾರಾಟಗಾರರಿಂದ ಪುಡಿಗಾಸು ಕೀಳುತ್ತಿದ್ದ, ಕೊಡದಿದ್ದರೆ ಕಿರುಕುಳ ಕೊಡುತ್ತಿದ್ದ ಓರ್ವ ಪೋಲೀಸ್‌ನನ್ನು ನಾಯಕ ಚರಂಡಿಯಲ್ಲಿ ಹೊರಳಾಡಿಸಿ ಹೊಡೆದಾಗ ಚಲನ ಚಿತ್ರ ಮಂದಿರದ ತುಂಬ ಕಿಕ್ಕಿರಿದ ಅಭಿಮಾನಿ ಜನ ಸಿಳ್ಳೆ ಹೊಡೆದರು, ಚಪ್ಪಾಳೆ ತಟ್ಟಿದರು, ಕೇಕೆ ಹಾಕಿದರು, ಕುಳಿತಲ್ಲಿ ಕುಣಿದರು, ಕುಪ್ಪಳಿಸಿದರು.

ರೈತನೋರ್ವನನ್ನು ತಾಲೂಕು ಆಫೀಸಿನ ಓರ್ವ ಗುಮಾಸ್ತ ಲಂಚಕ್ಕಾಗಿ ಪೀಡಿಸಿದಾಗ ನಾಯಕ ಈ ಗುಮಾಸ್ತನ ಶೇಪನ್ನೇ ಬದಲಾಯಿಸಿದಾಗ ಚಲನಚಿತ್ರ ಮಂದಿರದ ತುಂಬ ಕಿಕ್ಕಿರಿದ ಅಭಿಮಾನಿ ಜನ ಸಿಳ್ಳೆ ಹೊಡೆದರು, ಚಪ್ಪಾಳೆ ತಟ್ಟಿದರು, ಕೇಕೆ ಹಾಕಿದರು, ಕುಳಿತಲ್ಲಿ ಕುಣಿದರು, ಕುಪ್ಪಳಿಸಿದರು.

ಮಂತ್ರಿಯೋರ್ವ ದಂತವನ್ನು ಕದ್ದು ಸಾಗಿಸುವವರಿಗೆ ಬೆಂಬಲವಾಗಿ ನಿಂತಾಗ....

ಪ್ರಾಮಾಣಿಕ ಪೋಲೀಸ್ ಅಧಿಕಾರಿಯನ್ನು ಕೆಲ ಪುಢಾರಿಗಳು ವರ್ಗ ಮಾಡಿಸಿದಾಗ....

ವ್ಯಾಪಾರಿ ಅಕ್ಕಿಗೆ ಕಲ್ಲು, ಬೆಣ್ಣೆಗೆ ಹಿಟ್ಟು, ಎಣ್ಣೆಗೆ ಮತ್ತೇನೋ ಬೆರೆಸಿದಾಗ....

ಇವರಿಗೆಲ್ಲ....ನಾಯಕ....ನಮ್ಮ ಗುರು....

ಮುಖದ ಮೇಲೆ ನೀರಿಳಿಸಿದ....

ಮಾತಿನ ಕರಾರಿಯಿಂದ ತಿವಿದ....

ಹಾಡಿನ ಮೂಲಕ ಹಳಿದ ...

....ನಾಯಕನ ಅಭಿಮಾನಿ ಜನ ಚಲನಚಿತ್ರ ಮಂದಿರದಲ್ಲಿ ಕಿಕ್ಕಿರಿದು ತುಂಬಿದವರು ಸಿಳ್ಳೆ, ಚಪ್ಪಾಳೆ, ಕೇಕೆಯ ಮೂಲಕ ಸ್ಪಂದಿಸಿದರು.

"ನಮ್ ಗುರು....ಬಂಬಾಟ್ ಆಕ್ಟಿಂಗ್"

ಎಂದು ಬಾಯಿ ತುಂಬ ಹೊಗಳಿದರು.

ಚಲನಚಿತ್ರ ಮುಗಿಯಿತು.

ಸಹಸ್ರ ಜನ ಸಂತೋಷ, ಉತ್ಸಾಹ, ತೃಪ್ತಿಯಿಂದ ಹೊರಬಿದ್ದರು. ಅವರ ಅಭಿಮಾನಿ ನಾಯಕ ಏನೆಲ್ಲ ಮಾಡಿದ್ದನಲ್ಲ !

ಪುಂಡರ ಹುಟ್ಟಡಗಿಸಿದ್ದ.

ಭ್ರಷ್ಟರ ಸೊಲ್ಲಡಗಿಸಿದ್ದ.

ಅನಾಚಾರದ ವಿರುದ್ಧ ದನಿ ಎತ್ತಿದ್ದ.

ಭ್ರಷ್ಟಾಚಾರದ ನಿರ್ಮೂಲನ ಮಾಡಿದ್ದ.

ಈ ಜನ ದಿವ್ಯ ನೆಮ್ಮದಿಯಿಂದ ರಸ್ತೆಗೆ ಇಳಿದಾಗ....ಪರಮ ಸಂತೋಷದಿಂದ ಚಿತ್ರಮಂದಿರದಿಂದ ಹೊರಬಿದ್ದಾಗ....ನಾಯಕನ ಶಕ್ತಿ, ಯುಕ್ತಿ, ಧೈರ್ಯ, ಛಲ ಇತ್ಯಾದಿಗಳ ಗುಣಗಾನ ಮಾಡುತ್ತ ಹೊರಟಾಗ....

ಚಲನಚಿತ್ರ ಮಂದಿರದ ಹೊರಗೆ....

ಹೆದ್ದಾರಿಯ ಮೇಲೆ....

ಓರ್ವ ಮುಗ್ಧ ಹೆಣ್ಣನ್ನು ಈರ್ವರು ಪುಂಡರು ಅಡ್ಡಗಟ್ಟಿದ್ದಾರೆ....

ಅವಳ ಸೆರಗಿಗೆ ಕೈ ಹಾಕಿದ್ದಾರೆ....

ಅವಳು ಕೂಗಿಕೊಳ್ಳುತ್ತಿದ್ದಾಳೆ....

ಆಗ....

ಚಲನಚಿತ್ರ ನೋಡಿ ಹೊರ ಬಂದವರಲ್ಲಿ ಯಾರೋ ತಿರುಗಿ ನಿಂತು ಕೂಗಿದರು....

“ಏನ್ರಲೇ ನೋಡತೀರಾ....ನಮ್ ಗುರೂಗೆ ಫೋನ್ ಮಾಡ್ರೋ....ಅವರು ಬಂದ್ರು ಅಂದ್ರೆ ಈ ನನ್ ಮಕ್ಳ ಕೈ ಕಾಲು ಉಳೀಲಿಕ್ಕಿಲ್ಲ....ಈಗ್ಲೆ ಫೋನ್ ಮಾಡಿ....ಗುರು ಅಶೋಕಾ ಹೋಟಲಲ್ಲಿ ಇದಾರೆ....”

ಈ ಮಾತು ಕೇಳಿದ್ದೇ ಹತ್ತು ಜನ, ಗುರೂಗೆ....ತಮ್ಮ ಮೆಚ್ಚಿನ ನಾಯಕರಿಗೆ....ಫೋನ್ ಮಾಡಲು ಧಾವಿಸಿದರು.

ಉಳಿದ ಸಹಸ್ರ ಜನ....

ನಡು ಬೀದಿಯಲ್ಲಿ....ಆ ತರುಣಿಯ ಸೀರೆ ಹರಿಯುವುದನ್ನು, ರವಕೆ ಚಿಂದಿಯಾಗುವುದನ್ನು, ಆಕೆ ಮಾನಕ್ಕಾಗಿ ಪರಿತಪಿಸುವುದನ್ನು ನೋಡುತ್ತ, ನಾಯಕನಿಗಾಗಿ ಕಾಯುತ್ತ ನಿಂತರು....

ಮೀಶೆ ಮರಿಯಪ್ಪ ಹಳ್ಳೀಲೆಲ್ಲಾ ಕೆಂಡದ ಮರಿಯಪ್ಪ ಅಂತ್ಲೇ ಪ್ರಸಿದ್ಧಿ. ಯಾವಾಗ ನೋಡಿದ್ರೂ ಕಿಡಿ ಕಿಡಿ ಅಂತಿದ್ದು ಹಳ್ಳೀನೋರೆಲ್ಲಾ ಹೆದರಿ ನಡುಗ್ತ ಇದ್ರು. ಮೊನ್ನೆ ಮರಿಯಪ್ಪ ಸತ್ತ. ಹಳ್ಳೀಯೋರೆಲ್ಲಾ ಅವನ್ನ ಮಣ್ಣು ಮಾಡಿ ಬರೋವಾಗ ಆಕಾಶದಲ್ಲಿ ಭಾರೀ ಮೋಡ. ತಕ್ಷಣ ಕಣ್ಣು ಕೋರೈಸೋ ಹಾಗೆ ಮಿಂಚು. ಅದರೊಂದಿಗೇ ಫಠಾರ್ ಅಂತ ಸಿಡಿಲು. ಗುಂಪ್ನಲ್ಲಿದ್ದ ಕೆಂಚ “ಮರಿಯಣ್ಣ ಪಾದ ಸೇರ್ಕೊಂಡ” ಅಂತ ಗೊಣಗಿದ.

9

ಗಾದೆಯ ಮೂಲ !

—ಆನಂದ್

ನಾನಾಗ ಪ್ರೈಮರಿ ಕ್ಲಾಸು. ಒಂದಿನ ಒಂದಾಣೆ ಸಿಕ್ತು, ಜೇಬಿನಲ್ಲಿ. ಸರಿ ಅಂತ ಹತ್ತಿರದ ಅಂಗಡೀಗೆ ಹೋದೆ. ರೀ, ಇದಕ್ಕೆ ಒಂದು ಕಜ್ಜಾಯ ಕೊಡ್ರೀ ಅಂದೆ. ಅಂಗಡಿಯವನು ನಕ್ಕು, ಕಜ್ಜಾಯಕ್ಕೆ ಎರಡಾಣೆ ಮಗೂ ಅಂದ. ನನಗರ್ಥವಾಗಲಿಲ್ಲ. ಈ ಕಾಸಿಗೆ ಕೊಡ್ರೀ ಅಂದೆ. ಕಾಸಿಗೆ ತಕ್ಕ ಕಜ್ಜಾಯ ಅಂತ ಓದಿದ ನೆನಪು. ಅಂಗಡಿಯವನು ಇಲ್ಲ ಅಂತ ಖಡಾಖಂಡಿತವಾಗಿ ಹೇಳೇ ಬಿಟ್ಟ. ಅಲ್ಲಿದ್ದ ಸಭಿಕರಿಬ್ಬರು ಹುಡುಗ ಚೂಟಿಯಾಗಿದಾನೆ ಅಂತ ನಕ್ಕರು. ನನಗೆ ಕಜ್ಜಾಯ ಅಂತೂ ಸಿಗಲಿಲ್ಲ!

*　　*　　*　　*

ಸ್ವಲ್ಪ ದೊಡ್ಡ ಕ್ಲಾಸು. ಊರಿನಲ್ಲಿ ಸರ್ಕಸ್ ಬಂದಿತ್ತು. ಸ್ಕೂಲಿಗೆ ರಜಾ. ಸರ್ಕಸ್‌ಗೆ ಹೋಗುಕ್ಕೆ ದುಡ್ಡಿಲ್ಲ. ಸರ್ಕಸ್ ಡೇರೆಯ ಬಳಿ ಇದ್ದ ಆನೆ, ಕುದುರೆ ನೋಡ್ತಾ ಇದ್ದೆ. ತಕ್ಷಣ ದೊಡ್ಡ ಗಾಳಿ ಬೀಸಲು ಶುರು ಆಯ್ತು! ಡೇರೆ ಬಟ್ಟೆ ಎಲ್ಲಾ ಗಾಳೀಲಿ ಹಾರಾಡಲು ಶುರು. ಈ ಗಲಾಟೇಲಿ, ಇದೇ ಸಮಯ ಅಂತ ಆ ಬಟ್ಟೆ ಕೆಳಗೆ ಸರ್ಕಸ್ ಒಳಕ್ಕೆ ನುಗ್ಗಿಬಿಟ್ಟೆ! ಆದರೆ ನನ್ನ ದುರದೃಷ್ಟ! ಚಾರ್ಲಿ ಒಬ್ಬ ನನ್ನ ಶೌರ್ಯ ನೋಡಿ, ಹತ್ರ ಬಂದ. ಸುಮ್ಮನೆ ಹೊರಗೆ ಹೋಗ್ತೀಯೋ, ಆನೆ ಕಾಲಿನಲ್ಲಿ ತುಳಿಸಿ ಬಿಡ್ಲೋ ಅಂದ! ಮೊದಲಿನ ದಾರಿನೇ ಚುನಾಯಿಸಿದೆ! ಅಲ್ಲ, ಗಾಳೀ ಬಂದಾಗ ತೂರಿಕೋ ಅಂತ ದೊಡ್ಡೋರು ಯಾಕೆ ಅಂದರು?

*　　*　　*　　*

ಒಂದು ಪುಸ್ತಕದಲ್ಲಿತ್ತು ಈ ಗಾದೆ. ಒಂದು ಕಣ್ಣಿಗೆ ಸುಣ್ಣ, ಇನ್ನೊಂದು ಕಣ್ಣಿಗೆ ಬೆಣ್ಣೆ, ಅಂತ. ಸುಣ್ಣ ಕಣ್ಣಿಗೆ ಹಾಕಿದರೆ ಅಪಾಯ ಅಂತ ನನ್ನ ಮಂದ ಬುದ್ಧೀಗೂ ಗೊತ್ತಿತ್ತು. ಈ ಗಾದೆ ತತ್ವದ ಪ್ರಕಾರ ಬೆಣ್ಣೆ ಸೇಫು! ನನ್ನ ಬಡ್ಡಿಂಗ್ ವಿಜ್ಞಾನೀ ಮನಕ್ಕೆ ಈ ಪ್ರಯೋಗ ಮಾಡಲೇ ಬೇಕು ಅಂತ ಉತ್ಕಟ ಆಸೆ ಆಯ್ತು. ಸ್ವಲ್ಪ ಬೆಣ್ಣೆ ಬಲಗಣ್ಣಿಗೆ ಹಚ್ಚಿದೆ! ಶುರು ಆಯ್ತು ನೋಡಿ ಉರಿ, ಲಬೋ

ಉಜೋ ಅಂತ ಕಿರಿಚಲು ಆರಂಭ. ನಮ್ಮಮ್ಮ ಕೂಡಲೇ ಕಣ್ಣಿನ ಡಾಕ್ಟರ ಬಳಿ ಕರೆದೊಯ್ದಳು. ಅವರು, ಕಣ್ಣು ತೀರ ಕೆಂಪಗಾಗಿವೆ, ಹೇಗಾಯ್ತು? ಅಂದರು. ನಾನು ಅಳುತ್ತ ನನ್ನ ಪ್ರಯೋಗ ವಿವರಿಸಿದೆ. ನನ್ನ ಪ್ರಾಕ್ಟೀಸ್‌ನಲ್ಲೇ ಇಂತಹ ಕೇಸು ನೋಡಿಲ್ಲ! ಅಂತ ವಿಸ್ಮಯಪಟ್ಟು ಚಿಕಿತ್ಸೆ ಮಾಡಿದರು!

* * * *

ಕಾಲೇಜು ಮೆಟ್ಟಿಲು ಹತ್ತಿದೆ, ನಿಧಾನವಾಗಿ! ಆತುರಗಾರನಿಗೆ ಬುದ್ಧಿ ಮಟ್ಟು, ತಾಳಿದವನು ಬಾಳಿಯಾನು ಅಂತ ಓದಿದ್ದೆ ಹಲವಾರು ಸಲ. ಕಾಲೇಜ್ ಮುಗಿಸುವ ಹೊತ್ತಿಗೆ ಸಂಗಡಿಗರೆಲ್ಲ ಕೆಲಸಗಳಲ್ಲಿದ್ದರು! ನನ್ನಂಥ ಬೃಹಸ್ಪತೀಗೆ ಯಾರು ಕೆಲಸ ಕೊಡ್ತಾರೆ? ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಹತ್ರನೇ ರೂಂ ಮಾಡಿದೆ! ಮರಳಿ ಯತ್ನವ ಮಾಡು ಅಂತ ಮಾಡಿ ಮಾಡಿ ಸುಸ್ತಾದೆ! ಫಲ ಸಿಗಲಿಲ್ಲ!

* * * *

ಕೆಲಸ ಹುಡುಕ್ತಾ, ಹಿರಿಯರೊಬ್ಬರು ಸಿಕ್ಕಿದರು. ಅನುಭವಿ ವ್ಯಕ್ತಿ. ನನ್ನ ಕಷ್ಟ ತಿಳಿದು, ಕೇಳಿಲ್ಲವೇನ್ರಿ, ಕಣ್ಣು ಹೇಡಿ, ಕೈ ರಥ ಅಂತ. ಟೇಬಲ್ ಕೆಳಗೆ ಕೊಂಚ ಕೈ ಆಡಿಸಿ, ಕೆಲಸ ಕೂಡಲೇ ಸಿಕ್ಕುತ್ತೆ ಅಂತ ಬುದ್ಧಿವಾದ ಹೇಳಿದರು. ನಾನು, ಸ್ವಲ್ಪ ಬುದ್ಧಿ ಉಪಯೋಗಿಸಿ, ಆಫೀಸರ್ ಒಬ್ಬನ್ನ ಪತ್ತೆ ಮಾಡಿದೆ. ನನ್ನ ಸೂತ್ರ ಉಪಯೋಗಿಸಲು ಪ್ರಯತ್ನಿಸಿದೆ! ಅಲ್ಲ, ನನ್ನ ಲಕ್‌ಗೆ, ಭಾರತದ ಏಕಮಾತ್ರ ಹರಿಶ್ಚಂದ್ರ ಆ ಆಫೀಸರ್ ಆಗಿದ್ದ! ಕೆರಳಿ ಕೆಂಡವಾದ! ಲಂಚ ಕೊಡುಕ್ಕೆ ಬರ್ತೀರೇನ್ರೀ, ಅಂತ ಅವನ ಆಫೀಸ್‌ನಿಂದ ಓಡಿಸಿದ!

* * * *

ಹಾಸನದ ಹತ್ತಿರ ಹಳ್ಳೀಲಿ ನಮ್ಮ ಅಜ್ಜಿ ಇದಾರೆ. 90 ವರ್ಷ ಅವರಿಗೆ! ಅವರ ಹತ್ತಿರ ಮೊನ್ನೆ ಗಾದೆಗಳ ವಿಚಾರ ಮಾತಾಡ್ತಿದ್ದೆ. ಅವರು ಹೇಳಿದರು. 'ನೋಡು ಮಗೂ, ಒಂದು ವಾಕ್ಯ ಜ್ಞಾಪಕಾ ಇಟ್ಕೋ, ವೇದ ಸುಳ್ಳಾದ್ರೂ, ಗಾದೇ ಸುಳ್ಳಾಗುಲ್ಲ! ಅರ್ಥ ಆಯ್ತೇ?' ನನ್ನ ಕತೇನೆಲ್ಲ ಇವರ ಹತ್ರ ಯಾಕೆ ಬಿಚ್ಕೋದು ಅಂತ, 'ಹ್ಞೂ ಅಜ್ಜೀ' ಅಂದೆ!

ಸೀಮೆ ಎಣ್ಣೆ

(ದಾಸರ ಕ್ಷಮೆ ಕೋರಿ.)

—ಹಾ. ಮ್ಯ. ಸೂರಿ

ರಾಗ: ಸರಾಗ. ತಾಳ ನೀವು ಹಾಕಿದ್ದು.

ಸೀಮೆ ಎಣ್ಣೆ ಸಿಗದಲ್ಲಾ । ಅದರ ಜಾಡೂ ಸಿಕ್ಕದಲ್ಲಾ
ಗಾಡಿ ಹೋಗುವಾಗ ಎಣ್ಣೆ ಸೋರಿ ಹೋಯಿತಲ್ಲಾ॥


ಎಚ್ಚರಗೊಳಲಿಲ್ಲಾ ಮನವೇ, ಡಬ್ಬ ಕ್ಯೂನಲಿ
ಹಿಂದೆ ಉಳಿಯಿತಲ್ಲಾ।
ಸರದಿ ಬಂದಾಗ ಎಣ್ಣೆ ಮುಗಿಯಿತಲ್ಲಾ॥

ವೇಳೆ ಬಂದಿತಲ್ಲಾ ಅಡಿಗೆ ಆಗಲಿಲ್ಲಾ
ಅರೆ ಹುಚ್ಚನಂತಾದೆನಲ್ಲಾ
ಬಸ್ಸೂ ತಪ್ಪಿ ಕಾರ್ಯಾಲಯ ವೇಳೆ ತಪ್ಪಿತಲ್ಲಾ॥

ಅಗೋ, ಗಾಡಿಯು ಪುನಃ ಬಂದಿತಲ್ಲಾ
ಶ್ರೀ ಪುರಂದರ ವಿಠಲನ ಈಗ ನೆನೆಯುತ
ಡಬ್ಬ ಹಿಡಿದು ಕ್ಯೂನಲಿ ಮುಂದೆ ಸಾಗಿರಣ್ಣಾ॥

ಸ್ತ್ರೀ ಸಾರಥಿಯೊಬ್ಬಾಕೆಯ ಉದ್ಗಾರ

ನನಗೆ ಇಷ್ಟ ಇಲ್ದೇ ಇರೋ ಸಂಗತಿ ಯಾವ್ದು ಅಂದ್ರ. ಕಾರ್‌ನ ರಸ್ತೆ ಪಕ್ಕದಲ್ಲಿ ನಿಲ್ಲಿಸೋವಾಗ ಕೊನೇಲಿ ರಸ್ತೆ ಪಕ್ಕದ ಕಲ್ಲಿಂ ಕಾರಿನ ಪಕ್ಕಕ್ಕೆ ಕಿರ್‍ರ್ ಅಂತ ಉಜ್ಜುತ್ತೆ ನೋಡಿ ಆದೋ ಕಣ್ರಿ



"ಭಾರತದವರು ಬೀಜಿಂಗ್‌ನಲ್ಲಿ ಕೊನೇಗೆ ಕಾಲುಂ ಹಿಡಿದುಂ ಚಿನ್ನ ತೊಗೋ ಬೇಕಾಯ್ತಲ್ಲೇ"

ಕೇಳದವರ ಮೋಹಿನಿ ಆಟವು

—ಶಿವರಾಮ ಕಾರಂತ

ಕೊಟ್ಟವನು ಅವನೇ ನಮ್ಮ ಬುದ್ಧಿಯನು ಮೆಚ್ಚಿ,
ವರಮಾಟಮನಂ ಕೊಟ್ಟು ತಾನೆ ಹರಸಿದನಂ.
ಅವಗೆ ಸಾಕಾಗಿತ್ತು ಅವತಾರಗಳ ಎತ್ತಿ, ಎತ್ತಿ,
ಹಾಗೆನಿಸಿ—ನೆನೆದಂ ಭಸ್ಮಾಸುರನ
ಇತ್ತನೈ ಒಂದುಂ ವರ ಪರಮಾಣುಂ ವರವ.
ಜಗವ ಸೃಷ್ಟಿಸಿದಾತ, ಅದನು ತುಂಬಿಸಲೆಂದು
ಅಣು ಜೀವಿಗಳಿಂ ತೊಡಗಿ ತೆರತೆರನ ಬಗೆಯಿಂದ—
ಹುಳು, ಹಾವು, ಹೆಬ್ಬಾವು, ಹಸು, ಹಕ್ಕಿ, ಮತ್ತೊಂದು—
ಮೀನು, ಹೆಮ್ಮೀನು, ತಿಮಿ ತಿಮಿಂಗಿಲಗಳಿಂದ
ತೃಪ್ತಿ ಬಾರದೆ, ನೋಡಿ—ಥೂ ಬಿಟ್ಟ ಹೆಗ್ಗಾಳಿಗಳ!
ಅವು.ಯಾಕೊ, ಹೊಟ್ಟೆಗಿಲ್ಲದೆ ಏನೋ,
ಸತ್ತುವೈ ಒಂದು ದಿನ ಹುಟ್ಟಡಗಿ ಹೋಗಿ.
ಅದ ಕಂಡಂ ಕೊರಗಿರಬೇಕು ಕರ್ತಾರ!
ಕಪಿ ಕುಲವ ಸೃಷ್ಟಿಸುತೆ ಒಂದಿಷ್ಟು ತೃಪ್ತಿ ಪಟ್ಟ ,
ಮುಂದಿನಾ ಸರದಿಯಲಿ—ಯೋಚಿಸಿದ ಮತ್ತೂ,
ಕಪಿಯಂ ಬಾಲವ ಕಳಚಿ, ತಲೆ ತುಂಬ ಮಿದುಳಿರಿಸಿ,
'ಸಾಕಿನ್ನು ನನ್ನಾಟ ವಿರತಿ ತನಗಿರಲೆ'ಂದ.
ಬಿಟ್ಟಾನೆ ನರನಿನ್ನು ಅಷ್ಟೊಂದು ಮಿದುಳು ಹೊತ್ತು?
ವೃದ್ಧಿಸಿತು ಸಂತಾನ, ಹಬ್ಬಿಕೊಂಡಿತು ಜಗದಿ,
ಜಗದ ಆಡುಂಬೊಲವೆ—ನರ ತನ್ನದೆಂದ.
ಅವನ ಮರಿಗಳು ಕೆಲವು ಬಾನಾಚೆ ಇಣುಕಿದುವು.
ಇನ್ನು ಹಲಕೆಲವು ನೆಲವಗೆದು ನೋಡಿದುವು.
ಜಗದ ಮೂಲವು ಹೇಗೆ? ಮುಂದಿನಾ ಗುರಿಯೇನು?

ಇದರ ಗುಟ್ಟೇನಿಹುದು ಅರಿವೆವೆಂದು—
ತಿಣುಕಿದರು, ಇಣುಕಿದರು, ಹುಡುಕಿಯೇ ಹುಡುಕಿದುವು!
ಪರಮಾಣುಗಳ ಒಡೆದು ಚೆಲ್ಲಾಟವಾಡಿದರು!
ಇಷ್ಟಾದ ಹೊತ್ತಿನಲಿ ಬ್ರಹ್ಮ ಸೃಷ್ಟಿಯೆ ಬೆದರಿ ಕಂಗಾಲು!
ಆದಿ ಕರ್ತನು ಆಗ ಮೋಹಿನಿಯ ರೂಪ ತಾಳಿ ನಿಂದ.
"ಜ್ಞಾನಿ, ವಿಜ್ಞಾನಿಗಳೆ, ನಿಮ್ಮ ಮುಷ್ಟಿಯಲಿಹುದು ಪರಮಾಣು!
—ಎಂದ

"ಆ ಶಕ್ತಿ, ಈ ಶಕ್ತಿ, ತೈಲ ಇದ್ದಲು ಶಕ್ತಿ, ಮಿಂಚನ್ನು
ಮೀರಿದಾ ಶಕ್ತಿಯನು ನಿರ್ಮಿಸಿತು ನಿಮ್ಮ ಬುದ್ಧಿ ಶಕ್ತಿ"!
ಎಂಬ ಹೊಗಳಿಕೆ—ಕೇಳಿ ಮೈಯ್ಯ ಮರೆಯೆ ಅವರು
ಆಯ್ತು ಆಟಮು ಸ್ಫೋಟ, ವಿಸ್ಫೋಟ ಆ ಚಣಕೆ!
ಮೋಹಿನಿಯ ಇಂದ್ರಜಾಲಕ್ಕಾಯ್ತು ಲೋಕ ಭಸ್ಮ.

ತಪಸ್ವಿ-೧

ಇದ್ದನೊಬ್ಬ ತಪಸ್ವಿ ತೊರೆದೂಟ ನಿದ್ದೆ
ದೇವನಿದಿರಲಿ ಬರಲು ಹೇಳಿದನು "ಬಿದ್ದೆ!
ಅಯ್ಯೋ ಕೆಟ್ಟೆನು ನಾನು
ತಪಕೆ ಫಲ ಇದೆ ಏನು
ರಂಭೆಯೋ ಊರ್ವಶಿಯೋ ಬರುವಳೆಂದಿದ್ದೆ"

—ಅ. ರಾ. ಸೇ.

ಶಕುನ

—ಸ. ನ. ಅಶೋಕ

ಏಕೋ ಕಸಿವಿಸಿ, ಅದೇನೋ ಆತಂಕ. ಬೆಳಗ್ಗೆ ಎದ್ದಾಗಿನಿಂದ ಹೊಡೀತಾನೇ ಇದೆ, ಎಡ ರೆಪ್ಪೆ. ಪಂಚಾಂಗದಲ್ಲಿ ಓದಿದ ನೆನಪು, ಎಡ ರೆಪ್ಪೆ ಬಡಿದರೆ ಅನಾಹುತ. ಏನಪ್ಪಾ ಇದು ಗ್ರಹಚಾರ, ಅದೂ ಇಂದಿನ ಸೊಗಸಾದ ಸಂಡೇ....

ವಾರದ ಆರು ದಿನಗಳನ್ನು ಅದೆಂತೊ ಕಳೆಯುವುದು ಆಫೀಸಿನಲ್ಲಿ ಕೇವಲ ಮುಂಬರುವ ಸಂಡೇಯ ಆಶಯದಲ್ಲಿ. ಅಂದ ಹಾಗೆ ನಮಗೆ ಇನ್ನೂ ಆರು ದಿನ ಕೆಲಸವೇ ಗತಿ. ಐದು ದಿನಗಳಿದ್ದರೆ Saturdayಗೆ, I mean, ಶನಿವಾರಕ್ಕೇ ಕಾಯಬಹುದಿತ್ತು.

ಹೌದು, ಅದೆಷ್ಟು ಖುಶಿ ಅಂತೀರಾ, ವೀಕೆಂಡ್ ಎಂದರೆ? ಶನಿವಾರ-ಮಧ್ಯಾಹ್ನವೇ ವೀಕೆಂಡ್ ಮೂಡ್ ಆಫೀಸ್ ಫೈಲ್ ಎಲ್ಲ ಆಗಲೇ ಜೋಪಾನವಾಗಿಡಿಸಿ, ಎಲ್ಲ ಪ್ಲ್ಯಾನಿಂಗ, ಹೇಗೆ ಕಳೆಯೋದು ಈ ವೀಕೆಂಡನ್ನು ಅಂತ!

“ಅರೇ, ಈಗ ಮಹಾಭಾರತಾನೂ ಇಲ್ಲ ಟೀವೀಲಿ. ಹಾಗಾಗಿ ಬೆಳಗ್ಗೆ ಏಳಕ್ಕೂ ಮನಸು ಬಾರದು” ಕೇಶವ, ಬ್ರಹ್ಮಚಾರಿ. ನನ್ನಂತೆ

“ನಿಂಗ್ಯಾಕಪ್ಪ ಮಹಾಭಾರತ? ಯಾವುದಾದ್ರೂ ಮ್ಯಾಟಿನೀ ಷೋಗೆ ಹೋಗೋಣ ಬಾರೊ” ಎಂದೆ.

“ಹಾ........ಅಂದ ಹಾಗೆ Latest Hollywood hit ಬಂದಿದೆಯೋ. ಮಜಾ ಐತಂತೆ. ಅದಕ್ಕೇ ಹೋಗೋಣ ನಾಳೆ afternoon” ಇನ್ನೊಬ್ಬ forced ಬ್ರಹ್ಮಚಾರಿ, ಅಂದರೆ ಹೆಂಡ್ತಿ long leave, I mean, maternity leaveನಲ್ಲಿ ತವರಿಗೆ ಹೋಗಿದ್ದಾಳೆ. ಪಾಪ, ಬೇಚಾರಾ ನರಸಿಂಹನನ್ನು ಬಿಟ್ಟು

ನಾನೇ ಲಕ್ಕಿ. ಇನ್ನೂ ಬ್ರಹ್ಮಚಾರಿಯಾಗಿದ್ದು free bird ತರಹ ಬೇಕೆಂದಾಗ ಬೇಕಾದಲ್ಲಿಗೆ, ಏನೂ ತಕರಾರಿಲ್ಲ. ಯಾವ ಅಮ್ಮಾವ್ರ ಕಂಟ್ರೋಲ್ ಇಲ್ಲ. ವಿರಹ ವೇದನೆ, ನರಸಿಂಹನಂತೆ....ಪಾಪ, ದಾಡಿ ಕೂಡ ಈಗ ಬಿಟ್ಟಿದ್ದಾನೆ.... ಕೂಡ ಇಲ್ಲ.

ಗಡಿಯಾರ ನೋಡಿದೆ. ಆಗಲೇ ಕಾಲ ಚಕ್ರ ತಿರುಗಿ ಸಮಯ 10 ಗಂಟೆ ತೋರಿಸುತ್ತಿತ್ತು. ಮ್ಯಾಟನೀ ಷೋ ನೆಕ್ಸ್ಟ್ ಪ್ರೋಗ್ರಾಂ....

ಸರಿ. ಬೇಗ ಬೇಗ ಸ್ನಾನಾದಿ ಕಾರ್ಯಕ್ರಮಗಳನ್ನು ಮುಗಿಸಿದೆ. ಅಂತೆಯೇ ಆಂಜನೇಯನಿಗೆ ಬತ್ತಿ, ಅಂದರೆ ಊದುಬತ್ತಿ, ಉರಿಸಿ 'Good morning' ಎಂದೆ.

Really, ಅದೇನೊ ಸಮಾಧಾನವಾಗಂತ್ತೆ, ಒಮ್ಮೆ ದೇವರಿಗೆ ಕೈ ಜೋಡಿಸಿದಾಗ. ಆದೇನೊ ಹೇಳ್ತಾರಲ್ಲ, "ಎಲ್ಲ ದೇವರ ಮೇಲೆ ಭಾರ" ಅಂತ. ಅದೆಷ್ಟು ಭಾರ ಹೊರ್ತಾನೊ ಅವನೇ ಬಲ್ಲ. "ಎಲ್ಲವನು ಬಲ್ಲ ಪಂಡಿತನು ನಾನಲ್ಲ...." ಅಂತೂ ನಮ್ಮ ಯಾವ ಭಾರ ಇದ್ದರೂ ಆತನ ಮೇಲೆ ಹೊರಿಸಿ ನಿಶ್ಚಿಂತೆಯಾಗಿರಬಹುದು. ಅದೆಂತಹ Psychologial ಶಾಂತಿ ಅಂತೀರಾ?

ಸ್ವ ಪಾಕ ಬಿಸಿ ಬೇಳೆ ಭಾತ್ ಅನ್ನುವ ಸವಿಯಾದ(?)ಭೋಜನ ಹೊಡೆದದ್ದಾಯಿತು: ಆಹಾ! ಅದೆಂತಹ ರುಚಿ. ಎಷ್ಟೆಂದರೂ ಗಂಡಸರೇ ಅಡಿಗೆಯಲ್ಲಿ ಪ್ರವೀಣರು ಎನ್ನಬೇಕು. ಹಿಂದೆ ನಳ, ಭೀಮ ಇತ್ಯಾದಿಗಳು ಪಾಕ ಶಾಸ್ತ್ರ ಧುರೀಣರಾಗಿದ್ದರೆ, ಇಂದು ಕೂಡ ಯಾವ ಐದು ನಕ್ಷತ್ರ, ಮೂರು ನಕ್ಷತ್ರ ಹೋಟೆಲುಗಳಿಗೆ ಹೋದರೂ ಹೆಸರಾಂತ ಅಡಿಗೆಯವರೆಲ್ಲ ಗಂಡಸರೇ! ಅದಕ್ಕೇ ಪ್ರಾಯಶಃ ಈಗಿನ ಹುಡುಗಿಯರು ಅಡಿಗೆ ಮನೆ ಹೊಕ್ಕದೆಯೇ, ಮದುವೆಯಾದೊಡನೆ ಅಡಿಗೆ ಮನೆ ಛಾರ್ಜನ್ನು ತಮ್ಮ ಪ್ರಿಯತಮನಿಗೇ ನೀಡುವರು.

ಪ್ಯಾಂಟು, ಶರ್ಟು ಸಿಕ್ಕಿಸಿಕೊಂಡು ಹೊರಟಿದ್ದಾಯಿತು. ಪೂರ್ವ ನಿಯೋಜಿತ ಜಾಗದಲ್ಲಿ ಸ್ಥಾಪನೆ ಮಾಡಿದೆ ನನ್ನನ್ನೇ, ಕೇಶವ, ನರಸಿಂಹರ ದಾರಿ ಕಾಯುತ್ತಾ....ಅಬ್ಬಾ ಯಾರನ್ನೇ ಆಗಲಿ ಕಾಯುವುದು ಎಂದರೆ ಮಹತ್ತರ ಕೆಲಸವೇ. ಆದರಷ್ಟು ಬೋರ್ ಇನ್ನೊಂದಿಲ್ಲ. ಟೈಂ ಪಾಸ್ ಮಾಡಲು ಹತ್ತಿರ ಯಾರೂ ಇಲ್ಲ, Except for cigarette. ಅಂತೆಯೇ ಉರಿಸಿದೆ ಬತ್ತಿ....

ಜೀವನವೇ ಹೀಗೆ. ಒಬ್ಬರು ಇನ್ನೊಬ್ಬರಿಗಾಗಿ ಕಾಯುವುದು, ಸ್ನೇಹಿತ ಸ್ನೇಹಿತನಿಗಾಗಿ ಕಾಯುವುದು, ಪ್ರಿಯಕರ ಪ್ರಿಯತಮೆಗೆ, ತಾಯಿ ಮಗನಿಗೆ. 'ಕಾಯುವುದೇ ಕೈಲಾಸ' ರೇಶನ್ ಸಕ್ಕರೆಗೆ ಕಾಯುವುದು, ಪೆಟ್ರೋಲ್‌ಗಾಗಿ

ಕಾಯುವುದು, ಸಿನೇಮಾ ಟಿಕೆಟ್‌ಗೆ ಕಾಯುವುದು. ಬಹುಶಃ ನಾವೆಲ್ಲ ನಮ್ಮರ್ಧ ಜೀವನವ ಕಾಯುವುದರಲ್ಲೇ ಕಳೆಯುತ್ತೇವೆ.

ಆಗಲೇ ಎರಡು ಸಿಗರೇಟು ಬೂದಿಯಾಗಿತ್ತು, ಮೂರನೆಯದು ಹೊಗೆಯಾಡುತ್ತಿತ್ತು. ಗಂಟೆ ಎರಡಾಗುತ್ತ ಬಂದರೂ, ಇಬ್ಬರೂ ಆಸಾಮಿಗಳ ಪತ್ತೆ ಇಲ್ಲ.

"ಸ್ಸಾರಿ, ಬಾಸ್ ಏಳುವಾಗ ತುಂಬ ತಡವಾಯ್ತು. ಹಾಳು ಕರೆಂಟ್ ಇರಲಿಲ್ಲ ನಿನ್ನೆ ರಾತ್ರಿ. ಸೊಳ್ಳೆಗಳ ಕಾಟದಲ್ಲಿ ನಿದ್ದೆಯೇ ಬರದೆ, only ಬೆಳಗ್ಗೆಯಿಂದ ಬಂದಳು ನಿದ್ರಾದೇವಿ. ಹಾಗೆಯೇ ಇವನನ್ನೂ ಕರಕೊಂಡು ಬಂದೆ...." ಕೇಶವ ಬಡಬಡಿಸಿದ.

ಸರಿ, ಮೂವರೂ ತ್ರಿಮೂರ್ತಿಗಳು ಹೊರಟೆವು, ಥಿಯೇಟರ್‌ನತ್ತ. ಅಬ್ಬ! ಅದೇನು ರಶ್!! ನಾವೆಲ್ಲ ಏಳುವುದು ಲೇಟು ಎಂದು ಚಿಂತಿಸುತ್ತಿದ್ದರೆ ಅದೆಷ್ಟು ಮಂದಿ ಆಗಲೇ ಪರಿವಾರ ಸಮೇತ ಹಾಜರಾಗಿದ್ದಾರೆ! ತರ ತರಹದ ಪೋಸ್ಟರ್‌ಗಳು ಆಂಗ್ಲ ಚಿತ್ರ ಅಭಿಮಾನಿಗಳನ್ನು, ಅಭಿಮಾನಿಗಳಲ್ಲದವರನ್ನು ಎಲ್ಲರನ್ನೂ ಕೈ ಬೀಸಿ ಕರೆಯುತ್ತಿದ್ದವು ಬಂಡ ಕಾಣದ ಕ್ಯೂನಲ್ಲಿ ನಾವೂ ಸೇರಿದೆವು, ಕಾಯಲು. ಇರುವೆಯಂತೆ ಮೆಲ್ಲನೆ ಸಾಗಿತ್ತು ಮುಂದೆ ಕ್ಯೂ. ಇನ್ನೇನು ನಮ್ಮ ಛಾನ್ಸ್ ಬಂತು ಅನ್ನುವಾಗಲೇ 'ದಢಾರ್' ಕಿಟಕಿ ಮುಚ್ಚಿದ ಟಿಕೆಟ್‌ನವ, ಅದೇನೋ ಅದಮ್ಯ ಸಂತಸದಿಂದ; ಬಹುಶಃ ನಮ್ಮನ್ನೆಲ್ಲ ಕಾಯಿಸಿ ಕೊನೆಗೆ ತಾನೇ ಎಲ್ಲರಿಗಿಂತ ದೊಡ್ಡವ ಎಂಬ ಹೆಮ್ಮೆಯಿಂದ.

"ಅರೇ ಏನು ಮಾಡ್ಸೋದು? ಇನ್ನರ್ಧ ದಿನ ಕಳೆಯುವುದಾದ್ರೂ ಹೇಗೆ? Film ನೋಡದೇ Sunday, I mean, ಭಾನುವಾರ ವೇಸ್ಟ್ ಆದ ಹಾಗೆ ಅಲ್ವೊ?" ನರಸಿಂಹ ರಾಗ ಎಳೆದ.

"ಸರಿ, ಹೇಗೂ ಸಿನೇಮಾಕ್ಕೆಂದು ಹೊರಟಿದ್ದೇವೆ. ಬೇರೆ ಥಿಯೇಟರಿಗೆ ಹೋಗೋಣ. Try and try again and never say never again" ಕೇಶವ ತನ್ನ Logic ಹೇಳಿದ.

ಹಾಗೇ ಆಟೋ ಮಾಡಿಕೊಂಡು Nearest ಥಿಯೇಟರ್‌ಗೆ ಹೋದೆವು. ಯಾವುದೋ ದೇಶೀಯ ಭಾಷಾ ಚಿತ್ರ. ಯಾವುದಾದ್ರೂ ಸರಿ ಅಂತ ಟಿಕೇಟು ಕೊಂಡು ಒಳ ಹೊಕ್ಕೆವು.

ಅಬ್ಬ! ನಾಲ್ಕು ಸಾವಿರ ಚಿಲ್ಲರೆ ಮೀಟರ್ ಚಿತ್ರ!! ಶುರುವಾಯ್ತು, ದೇವರ ಸ್ತೋತ್ರದೊಂದಿಗೆ. ಎಲ್ಲ ಅವನ ಮೇಲೆಯೇ ಭಾರ. ಅದೇ Normal formula ಚಿತ್ರ. ಚ್ಯೂಯಿಂಗಮ್ ಎಳೆದಂತೆ ಎಳೆಯುತ್ತಿದ್ದರು Film director. ಹಾಡು, ಡ್ಯಾನ್ಸ್, ಹೊಡೆದಾಟ, ಅಳು, ಎಲ್ಲ ಒಂದಾದ ಮೇಲೊಂದು ಬರುತ್ತಲೇ ಇತ್ತು. ಬಹುಶಃ ಬಂದ ಪ್ರೇಕ್ಷಕರನ್ನು ಸರಿಯಾಗಿ ಥಳಿಸುವ ಚಪಲವಿರಬೇಕು, ಪ್ರೊಡ್ಯೂಸರ್‌ಗೆ. ಇಂತಹ ಚಿತ್ರಗಳನ್ನು ನೋಡಿದರೆ ಅನಂತರ ಒಂದೆರಡು ತಿಂಗಳು ಸಿನೆಮಾ ಎಂದರೆ ಭಯ ಪಡಬೇಕು. ಸುತ್ತಿಗೆಯಿಂದ ಬಡಿದಂತೆ 'ಸುತ್ತಿ'ಯೋ 'ಸುತ್ತಿ' ತಲೆ ಚಿಟ್ಟು ಎನ್ನತೊಡಗಿತು, ಫಿಲ್ಮ್ ಮುಗಿಯುವ ಹೊತ್ತಿಗೆ.

ಅರೇ, Sudden ಆಗಿ ಎಚ್ಚರೆಷ್ಟೆ ಬಡಿಯುವುದು ನಿಂತಿತಲ್ಲ!

ತಪಸ್ವಿ - ೨

ಕಾನನದಿ ಬಂದಳಪ್ಸರೆ ತಪಕೆ ಮೆಚ್ಚಿ
ತೆರೆದ ತೋಳನು ಮುಂದುರಿ ಹೇಳಿದಳು ಬೆಚ್ಚಿ
"ಓ ತಪಸ್ವಿಯೆ ಹೆಡ್ಡ
ಏಳು ಬೋಳಿಸು ಗಡ್ಡ
ಪ್ರೇಮದ ಪ್ರವಾಹದಲಿ ಹೋಗೋಣ ಕೊಚ್ಚಿ"

—ಅ. ರಾ. ಸೇ.

ಸಮಸ್ಯೆ-ಪರಿಹಾರ

—ಶಿವು

ಸಂಜೆ ಎಂಟು ಘಂಟೆ ಸಮಯ. ಅಬ್ಬರದಿಂದ ಅರ್ಧ ತಾಸು ಹೊಡೆದ ಮಳೆ ನಿಂತಿದ್ದು, ಮಳೆ ಮಣ್ಣಿನ ವಾಸನೆ ಸುತ್ತೆಲ್ಲಾ ಹರಡಿತ್ತು. ಕ್ಲಬ್ಬಿನ ಹೊರ ಆವರಣದ ಹುಲ್ಲು ಹಾಸಿನ ಮೇಲೆ ಆರಾಮ ಕುರ್ಚಿಗಳಲ್ಲಿ ಬೀಡು ಬಿಟ್ಟಿದ್ದ ನಮ್ಮ ಗುಂಪು ಎಂದಿನಂತೆ ಬಿಸಿ ಬಿಸಿ ಚರ್ಚೆಯಲ್ಲಿ ತೊಡಗಿತ್ತು.

"ನಮ್ಮ ದೇಶದ ಬಡತನಕ್ಕೆ ಪರಿಹಾರಾನೇ ಇಲ್ವೇನ್ರೋ? ಸ್ವಾತಂತ್ರ್ಯ ಬಂದು 40 ವರ್ಷಕ್ಕೆ ಜಾಸ್ತಿ ಆಗಿದ್ರೂ ಜುಜುಬಿ ಶ್ರೀ ಲಂಕಾ, ಸೂಡಾನ್ ದೇಶಗಳಿಗಿಂತ ಕಡೆ ಆಗ್ಬಿಟ್ಟಿದ್ದೀವಲ್ಲಾ. ಬ್ರೆಸಿಲ್ ಕೂಡ ನಮ್ಮಂತೆ ಹಿಂದುಳಿದ ದೇಶ. ಥರ್ಡ್ ವರ್ಲ್ಡ್ ಕಂಟ್ರಿ. ಅಲ್ಲಿನ ಪ್ರತಿ ಪ್ರಜೆಯ G. N. P. ಪಾಲು ಎಷ್ಟು ಗೊತ್ತಾ?" ರೆಡ್ಡಿ ಪ್ರಶ್ನೆ ಕೇಳಲಿಲ್ಲ. ಉದ್ಗರಿಸಿದ, ಅಷ್ಟೆ. ಎಕನಾಮಿಕ್ಸ್ ವಿಷಯ ನಮಗೇನೂ ಗೊತ್ತಿಲ್ಲ ಅನ್ನೋದು ಅವನಿಗೂ ಗೊತ್ತು. ಒಂದು ಗುಟುಕು ಬೀರ್ ಹೀರಿ ಅವನೇ ಮುಂದುವರೆಸಿದ.

"2.160 ಡಾಲರ್ ಒಂದು ವರ್ಷಕ್ಕೆ. ನಮ್ಮ ದೇಶದ್ದು 340 ಡಾಲರ್. ಬ್ರೆಸಿಲ್‌ನಂಥ ಬಡ ದೇಶದ ಮಟ್ಟಕ್ಕೆ ನಾವು ಮುಟ್ಟಬೇಕಾದ್ರೂ ನಮ್ಮ ದೇಶದ ಒಟ್ಟು ಉತ್ಪಾದನೆ ಆರು ಪಟ್ಟು ಹೆಚ್ಚಬೇಕು. ಸುಮಾರು ಕ್ರಿ ಶ. 8990ಕ್ಕಾದರೂ ಆಗುತ್ತೇನೋ!"

"ಎಕಾನಮಿ ಹಾಗಿರಲಿ ರವಿ, ಬಡತನಾನಾದ್ರೂ ಶಾಂತವಾಗಿ ಅನುಭವಿಸೋಣ ಅಂದ್ರೆ, ಈ ಮಂಡಲ್ ಗಲಾಟೆ, ರಾಮ ಜನ್ಮ ಭೂಮಿ, ನಾಲದ್ದಕ್ಕೆ ಗಲ್ಫ್ ಕ್ರೈಸಿಸ್ ಬೇರೆ. ಇವುಗಳ ಮಧ್ಯೆ ರಾಜಕೀಯ ಧುರೀಣರ ಚೆಲ್ಲಾಟ. ದೇವ್ರೇ ಗತಿ" ಬಾಲುವಿನ ಡಿಪ್ರೆಸಿಂಗ್ ಕಾಂಟ್ರಿಬ್ಯೂಷನ್

ದಿನನಿತ್ಯದ ತಾಪತ್ರಯಗಳನ್ನ ಮರೆಯೋದಕ್ಕೆ ಅಂತ ನಾವೆಲ್ಲಾ ಕ್ಲಬ್ಬಿಗೆ ಹೋಗೋದು. ಅಲ್ಲಿ ಗುಂಡು ಹಾಕಿ, ಸ್ವಲ್ಪ ಹಾಸ್ಯ, ಹುಡುಗಾಟ ಮಾತಾಡಿ ತಲೆ

ಪಗುರ ಪಮಾಡಿಕೊಳ್ಳೋಣ ಅಂದ್ರೆ ಇವತ್ತಿನ ಟಾಪಿಕ್ಕು ನಮ್ಮ ದೇಶದ ಗ್ರಿಮ್ ರಿಯಾಲಿಟಿ. ಟಾರ್ಚ್ ಇಟ್ಟು ಹುಡುಕಿದ್ರೂ ಹಾಸ್ಯ ಸಿಗೋ ಹಾಗೆ ಕಾಣಿಸಲಿಲ್ಲ.

ತಕ್ಷಣ ಮಿಂಚು ಹೊಳೆದಂತಾಯಿತು. ದೇವಾನಂದಾನಿ ನಮ್ಮ ಗುಂಪಿನ ಹತ್ತಿರ ಬರುತ್ತಿದ್ದ ಒಂದು ಬೆತ್ತದ ಕುರ್ಚಿ ಹಿಡಿದುಕೊಂಡಿದ್ದ ಬೇರರ್ ಜೋಸೆಫ್ ಅವನ ಮುಂದೆ. ಜೋಸೆಫ್ ಹಾಕಿದ ಕುರ್ಚಿಯಲ್ಲಿ ನಿಧಾನವಾಗಿ ಕುಳಿತು, ಬಾಗಿಲು ಮುಂದೆ ಇದ್ದ ಚಿಕನ್ ಟಿಕ್ಕಾ ತುಂಡೊಂದನ್ನು ದೇವು ಬಾಯಿಗೆ ಹಾಕಿಕೊಂಡ.

"ದೇವೂ, ಈ ರವಿ, ಬಾಲು ಇಬ್ರೂ ನಮ್ಮ ದೇಶದ ಸಮಸ್ಯೆಗಳ ಬಗ್ಗೆ ಮಾತು ಶುರು ಮಾಡಿದ್ದಾರೆ. ಭಾರತದ ಬಡತನ, ಮಂಡಲದ ಕೆಂಡಾಮಂಡಲ ಬಿಸಿ, ರಾಮ-ರಹೀಮರ ಸನ್ನದ್ಧತೆ, ಸದ್ದಾಮರ ಹಠ, ಇದಕ್ಕೆಲ್ಲಾ ಪರಿಹಾರಾನೇ ಇಲ್ಲ ಅಂತ ಅವರ ಮತ. ನಿನ್ನ ಅನಿಸಿಕೆ ಏನು?" ನಾನೇ ದೇವೂಗೆ ಓಪನಿಂಗ್ ಕೊಟ್ಟೆ.

"ಪರಿಹಾರ ಇಲ್ದೆ ಏನು? ಅದನ್ನ ಜಾರಿಗೊಳಿಸೋ ಅಂಥ ಜನನಾಯಕರು ಬೇಕು ಅಷ್ಟ ..." ದೇವೂ ಒಂದು ಕ್ಷಣ ಮಾತು ನಿಲ್ಲಿಸಿ ಸಿಗರೇಟ್ ಹಚ್ಚಿದ.

"ವಿ. ಪಿ. ಸಿಂಗ್ ಕೈಲಿ ಆಗೊಲ್ಲ ಅಂತೀಯೇನು?" ಅರುಣನ ಪ್ರಶ್ನೆ.

"ನಿಮ್ಮ ವೀಪಿಂಗ್ ಸಿಂಗ್ ಆಗ್ಲಿ, ರೇಜಿಂಗ್ ರಾಜೀವ್ ಆಗ್ಲಿ ಇಂಥಾ ಕ್ರಿಯೇಟಿವ್ ಪರಿಹಾರಾನ ಜಾರಿಗೆ ತರೋದಿಲ್ಲ. ಈ ಪರಿಹಾರ ಅರ್ಥ ಆಗೋ ದಕ್ಕೆ ಲಾಜಿಕಲ್ ಬ್ರೈನ್ ಬೇಕು, ಗುರೂ.

ಈಗ ನೋಡು, ಸಮಸ್ಯೆಗಳು ನಾಲ್ಕು. ಸದ್ದಾಂ ಹಠ, ಮಂಡಲ್ ಮಂಡಲ್, ಅಯೋಧ್ಯಾ ಡಿಲೆಮಾ, ಮತ್ತೆ ಪೆರಿನಿಯಲ್ ಪಾವರ್ಟಿ. ಅಷ್ಟೆ ತಾನೆ.

ನನ್ನ ಪ್ಲಾನ್ ಜಾರಿಗೊಳಿಸಿದ್ರೆ ಒಂದೇ ಏಟಿನಲ್ಲಿ ಈ ನಾಲ್ಕು ಸಮಸ್ಯೆಗಳನ್ನ ಪರಿಹರಿಸೋದೇ ಅಲ್ದೆ, ವಿಶ್ವಾದ್ಯಂತ ಶಾಂತಿ ಹರಡೊ ಹಾಗೆ ಮಾಡಬಹುದು. ಇದು ಮೂರು ಹಂತದ ಯೋಜನೆ.

ಮೊದಲನೆಯ ಹಂತ : ಸದ್ದಾಂ ಹುಸೇನ್ ಅವರಿಗೆ ಒಂದು ಟೆಲಿಗ್ರಾಂ ಕಳಿಸಿ ಆ ಲಂಗೋಟಿ ಅಗಲ ಕುವೈತ್ ಬಿಟ್ಟು ಇಲ್ಲಿ ಬನ್ನಿ ಪೂರ್ತಿ ಉತ್ತರ ಪ್ರದೇಶ

ಬಿಟ್ಟುಕೊಡ್ತೀವಿ. ಇಲ್ಲಿ ಇನ್ನೊಂದು ಇರಾಕ್ ಕಟ್ಟಬಹುದು ಅಂತ.

ಎರಡನೆಯ ಹಂತ : ದೇಶದಲ್ಲಿರೋ ಮುಂದುವರಿದೋರೆಲ್ಲಾ ಉತ್ತರ ಪ್ರದೇಶದಲ್ಲಿ ಮಾತ್ರ ವಾಸಿಸ್ಬೇಕು ಮಿಕೋರೆಲ್ಲಾ ದೇಶದ ಮಿಕ್ಕ ಭಾಗಗಳಲ್ಲಿ ಮಾತ್ರ ವಾಸಿಸಬೇಕು ಅಂತ ಫರ್ಮಾನ್ ಹೊರಡಿಸೋದು.

ಮೂರನೆಯ ಹಂತ : ನಮ್ಮ ಇರಾಕ್ ಭಾರತದ ಮಧ್ಯೆ Land lock ಆಗಿರೋದ್ರಿಂದ, ಅವರು ಮುಂಬಯಿ, ಕಲ್ಕತ್ತಾ ಬಂದರುಗಳನ್ನ ಉಪಯೋಗಿ ಸೋದಕ್ಕೆ ಹೇರಳವಾಗಿ ಸುಂಕ ವಿಧಿಸಬೇಕು.

ಈಗ ನೋಡಿ, ಭಾರತದಲ್ಲಿ ಎಲ್ಲಾ ಹಿಂದುಳಿದೋರೇ ಇರೋದ್ರಿಂದ 27% ಯಾಕೆ 100% ಮೀಸಲಾತಿ ಮಾಡಬಹುದು. ಯಾರೂ ಬೇಡ ಅನ್ನೋದಿಲ್ಲ.

ಅಯೋಧ್ಯಾಗೆ ಯಾರು ಬೇಕಾದರೂ ರಥ ತೊಗೊಂಡು ಹೋಗಲಿ. ಆವರ ಸದ್ದಾಂ ಸೈನ್ಯ ಇದಿರಿಸಬೇಕಾಗುತ್ತೆ, ಅಷ್ಟೆ.

ಕೋಟಿಗಟ್ಟಲೆ ಸುಂಕ ಸಿಕ್ಕಿದ್ದರೆ ಭಾರತದ ಬಡತನ ಎಲ್ಲಿಂದ ಬಂತು?

ಕೊನೆಗೆ ಸದ್ದಾಂ ಕುವೈತ್ ಬಿಟ್ಟುಕೊಟ್ಟ ಮೇಲೆ. ವಿಶ್ವ ಶಾಂತಿ ನೆಲೆಸಿದ ಹಾಗೆ ತಾನೆ?

ನೋಡಿದ್ರಾ, ನನ್ನ ಪರಿಹಾರ, ಪರಿಸ್ಥಿತಿಗೆ ಹೇಳಿ ಮಾಡಿಸಿದ ಹಾಗಿದೆ ಅಂದ ದೇವು. ಮುಖ ಗಂಭೀರವಾಗಿದ್ದರೂ ಕಣ್ಣಂಚಿನಲ್ಲಿ ನಗೆ ಇಣುಕುತ್ತಿತ್ತು.

ಇಷ್ಟು ಹೊತ್ತೂ ಸುಮ್ಮನೆ ಕೂತಿದ್ದ ಅರುಣ ಗಂಟಲು ಸರಿ ಮಾಡಿಕೊಂಡ.

ದೇವೂ ಮಾತಿಗೆ ಇದಿರು ಹೇಳೋ ಧೈರ್ಯ ಅರುಣನಿಗೆ ಬಂತಲ್ಲ ಅಂತ ನಮಗೆಲ್ಲಾ ಆಶ್ಚರ್ಯ.

ಅರುಣ ಹೇಳಿದ.

"ಒಪ್ಕೊಂಡೆ ದೇವು. ನಿನ್ನ ಪರಿಹಾರ ಪೊಲಿಟಿಕ್ಕೇನೋ ಸೂಕ್ತವಾಗೇ ಕಾಣುತ್ತೆ. ಆದ್ರೆ ಒಂದೇ ಒಂದು ವೀಕ್ ಪಾಯಿಂಟ್ ನಿನ್ನ ಪ್ಲ್ಯಾನ್‌ನಲ್ಲಿ, ಅದ್ರಿಂದ ನಿನ್ನ ಮೂರು ಹಂತಗಳೂ ಮುರಿದು ಬೀಳೋದು ಖಂಡಿತ."

ದೇವೂ ಮಾತನಾಡಲಿಲ್ಲ. ಆದರೆ ಮುಖದಲ್ಲಿ ಕುತೂಹಲ ತುಂಬಿತ್ತು. ಅರುಣ ಮುಂದುವರಿಸಿದ.

"ಸದ್ದಾಂ ಹುಸೇನ್ ತನ್ನ ಸಂಗಡಿಗರೊಡನೆ ಹೊಸ ಇರಾಕ್ ಕಟ್ಟಲು ಉತ್ತರ ಪ್ರದೇಶಕ್ಕೆ ಬರ್ತಾರೆ ಅಂತ ಹೇಳ್ದೆ ಅಲ್ವೇ ನೀನು? ಅಲ್ಲಿಗೆ ಬಂದಾಗ ಮೊದಲು ಅವರ ಕಣ್ಣಿಗೆ ಬೀಳೋದು ಏನು? ಮುಲಾಯಂ ಸಿಂಗ್ ಮಾಡಿರೋ ಭಾಷಾ ಕಾಯ್ದೆ—ಇಂಗ್ಲಿಷ್ ಸ್ಕೂಲುಗಳನ್ನೆಲ್ಲಾ ನಿರ್ನಾಮ ಮಾಡಬೇಕು; ಜೆನೆಟಿಕ್ಸ್, ನ್ಯೂಕ್ಲಿಯರ್ ಫಿಸಿಕ್ಸ್ ಎಲ್ಲಾನೂ ಹಿಂದೀಲೇ ಕಲಿಸಬೇಕು.

ಇದನ್ನು ನೋಡಿದ ತಕ್ಷಣ ಸದ್ದಾಂ ಮತ್ತು ಸಂಗಡಿಗರು ನಗುಕೆ ಶುರು ಮಾಡಿ, ನಕ್ಕೂ ನಕ್ಕೂ ಹೊಟ್ಟೆ ಹುಣ್ಣಾಗಿ, ಆ ಅಲ್ಸರ್ ಮರ್ಕ್ಯರ್ ಆಗಿ, ಎಲ್ಲಾ ಅಸು ನೀಗಿದ ಮೇಲೆ ನಿನ್ನ ಕೋಟಿಗಟ್ಟಲೆ ಡಾಲರ್ ಸುಂಕ ಕೊಡುಕ್ಕೇ ಯಾರೂ ಇರೋಲ್ಲವಲ್ಲ''

ಮೊಟ್ಟ ಮೊದಲಿಗೆ ದೇವೂ ಬೇಸ್ತು ಬಿದ್ದ.

''ಒಪ್ದೆ ಅರುಣ. ಟೂಷೆ" ಅಂದ ದೇವೂ.

ಸ್ತ್ರೀ ಸಮಾಜದಲ್ಲಿ ವಾರಕ್ಕೆರಡು ದಿನ ಗೃಹಿಣಿಯರು ತಮ್ಮ ತಮ್ಮ ಕಷ್ಟಗಳನ್ನು ಪರಿಹರಿಸಲು ಸಭೆ ನಡೆಸುತ್ತಾರಂತೆ.

ಕಷ್ಟಗಳು ಹೊರಗೆ ಕಾದಿದ್ದು ಸಭೆ ಮುಗಿದ ನಂತರ ಹೆಂಡತಿಯರನ್ನು ಮನೆಗೆ ಕರೆದುಕೊಂಡು ಹೋಗುತ್ತವಂತೆ.

—ಕೊರವಂಜಿಯಿಂದ

ವಾದ - ವಿವಾದ

—ಗುಂಡ

ಅಲ್ಲಾ, ಮದುವೆ ಆಗಿ ಇಷ್ಟು ವರ್ಷಗಳಾದ್ರೂ, ಒಂದ್ಸಲ ಕೂಡ ನಾನು ನನ್ನ ಹೆಂಡ್ತಿ ಹತ್ರ ವಾದ ಮಾಡಿ ಗೆದ್ದಿಲ್ಲವಲ್ಲಾ, ಯಾಕೆ ಹೀಗೆ ಅಂತೀರಿ?

ನಾನೇನು ಮಾತು ಬರದ ಪ್ರಾಣಿಯಲ್ಲ. ಕಾಲೇಜ್ ಡಿಬೇಟ್‌ನಲ್ಲೆಲ್ಲಾ ನನ್ನದೇ ಫಸ್ಟ್ ಪ್ರೈಸ್ ಚಿಕ್ಕಂದಿನಲ್ಲಿ, ನಮ್ಮ ಗಲ್ಲಿ ಬೀದೀಲಿ ಧಾಂಡಿಗರ ಜೊತೆ ಆಟ ಆಡೋವಾಗ, ನನ್ನ ಚುರುಕು ನಾಲಿಗೆ ಸಹಾಯ ಇಲ್ದೆ ಇದ್ರೆ ನಿಭಾಯಿಸೋಕ್ಕೆ ಆಗ್ತಿರಲಿಲ್ಲ. ಮೊನ್ನೆ ಯಾವನೋ ಒಬ್ಬ ಬೋಧನೆ ಶುರು ಮಾಡ್ದ. "ಸಿಗರೇಟು ಸೇದಿದ್ರೆ ಆಸ್ತಮಾ ಜಾಸ್ತಿ ಆಗುತ್ತೆ" ಅಂತ. ಹೇಳಿ ಕೇಳಿ ನಾನು ದಿನಾ ಒಂದು ಪ್ಯಾಕ್ ಖಾಲಿ ಮಾಡೋ ಪ್ರಾಣಿ. ಇಂಥ ಕುರುಡು ನಂಬಿಕೆನೆಲ್ಲಾ ಸುಮ್ನೆ ಕೇಳಿಸ್ಕೊಂಡು ಕೂತಿರೋಕ್ಕೆ ಆಗುತ್ಯೆ? ಶುರು ಮಾಡಿದೆ ನನ್ನ ವರಸೆ. "ಅಲ್ಲಯ್ಯ, ಸಿಗರೇಟು ಸೇದೊ ವಿಚಾರದಲ್ಲಿ ಎ. ಐ. ಐ. ಎಂ. ಎಸ್ ನ ಡಾ|| ಸುಬ್ರತೋ ಮುಖರ್ಜಿ ಅವರ ಪುಸ್ತಕ ಓದಿದ್ದೀಯಾ?" ಅಂತ ಕೇಳಿದೆ.

"ಯಾರ ಪುಸ್ತಕ?" ಆತ ಗಾಬರಿಯಿಂದ ಕೇಳಿದ.

"ನಿಸ್ಸೂರಾಯ್ತು. ಡಾ|| ಸುಬ್ರತೋ ಮುಖರ್ಜಿ ಅವರ ಪುಸ್ತಕ ಓದಿ ಬಾ. ಸಿಗರೇಟ್ ವಿಚಾರ ಆಮೇಲೆ ಮಾತನಾಡೋಣಂತೆ. ಒಳ್ಳೇ ಬುದ್ಧಿವಂತ" ಅಂತ ಹೇಳಿ ಮುಗಿಸಿದೆ. ಈಗಲೂ ಆತ ಆ ಪುಸ್ತಕಾನ ಅಂಗ್ಡೀಗಳಲ್ಲೆಲ್ಲಾ ಹುಡುಕ್ತಾ ಇರಬಹುದು.

ವಾದಗಳಲ್ಲಿ ಸಿಕ್ಕಿ ಹಾಕಿಕೊಂಡಾಗ ತಪ್ಪಿಸಿಕೊಳ್ಳೊದಕ್ಕೆ ಇನ್ನೊಂದು ವಿಧಾನ ಹೇಳ್ತೀನಿ ಕೇಳಿ. ಅದು "ಅಷ್ಟೂ ಗೊತ್ತಿಲ್ಲ ಇವನಿಗೆ" ಉಪಾಯ. ಗುಂಪುಗಳಲ್ಲಿ ಮಾತಾಡ್ತಾ ಇರೋವಾಗ ಇದರ ಉಪಯೋಗ ಬಹಳ. ಈಗ ಪೆಟ್ರೋಲ್ ಬೆಲೆ ಏರಿಕೆ ಬಗ್ಗೆ ವಾದ ವಿವಾದ ಆಗ್ತಾ ಇದೆ ಅಂತ ಇಟ್ಕೊಳ್ಳೋಣ. ನಿಮ್ಮ ಬಲ ಕುಗ್ಗುತ್ತಾ ಇದೆ. ಎದುರಾಳಿ ಗೆಲ್ತಾ ಇದಾನೆ. ತಕ್ಷಣ ನೀವು ಒಂದು ಅಸಂಬದ್ಧ ಹೇಳಿಕೆ ತೂರಿಸಿ.

"ಒಂದು ಗ್ರಾಂ ಚಿನ್ನದ ಬೆಲೆ, ಒಂದು ಗ್ರಾಂ ಬೆಳ್ಳಿಯ ಬೆಲೆಗಿಂತ ಜಾಸ್ತಿ ಅಂತ ಒಪ್ಕೊತೀಯಾ ತಾನೆ?"

ಬಲೆಗೆ ಬಿದ್ದ ನಿಮ್ಮ ಎದುರಾಳಿ. "ಅದು ನಿಜ. ಆದ್ರೆ ಅದಕ್ಕೂ ಪೆಟ್ರೋಲಿಗೂ ಏನು ಸಂಬಂಧ?"

ಆಗ ನೀವು ಅಧಿಕಾರವಾಣಿಯಿಂದ "ಅಯ್ಯೋ, ಅಷ್ಟೂ ಗೊತ್ತಿಲ್ಲ ಇವನಿಗೆ. ನೀವಾದ್ರೂ ಹೇಳ್ರಪ್ಪ ಈ ಮುಂಕುದಿಣ್ಣೆಗೆ" ಅಂತ ಹೇಳ್ತೀರ.

ಗುಂಪಿನ ಮಿಕ್ಕೋರಿಗೆ ತಾವು ಮುಂಕುದಿಣ್ಣೆಗಳು ಅಂತ ತೋರಿಸ್ಕೊಳ್ಳೊಕ್ಕೆ ಖಂಡಿತ ಇಷ್ಟ ಇರೋದಿಲ್ಲ. ನೀವು ವಿಜಯಿಗಳಾಗಿ ನಿಧಾನವಾಗಿ ನಿಷ್ಕ್ರಮಿಸ ಬಹುದು.

ನನಗೆ ಇಷ್ಟೆಲ್ಲಾ ಪರಿಣತಿ ಇದ್ರೂ ನನ್ನ ಹೆಂಡ್ತಿ ಹತ್ರ ಮಾತ್ರ ಯಾವುದೂ ಪ್ರಯೋಜನಕ್ಕೆ ಒದಗಿರೋದಿಲ್ಲ.

ಮೊನ್ನೆ "ಟಿಪ್ಪೂ ಸುಲ್ತಾನ್" ನೋಡ್ತಾ ಇದ್ದಾಗ ಸಂಜಯ್ ಖಾನ್ ತೆರೆಯ ಮೇಲೆ ಬಂದಾಗ ನನ್ನ ಸಹಧರ್ಮಿಣಿ

"ನೋಡ್ರಿ, ಸಂಜಯ್ ಖಾನ್ ಮುಖದಲ್ಲಿ ಎಂಥಾ ರಾಜ ಕಳೆ ಇದೆ. ಅವನನ್ನು ಯಾಕೆ ಕರ್ನಾಟಕದ ಮುಖ್ಯ ಮಂತ್ರಿ ಮಾಡಬಾರ್ದು?" ಅಂತ ಕೇಳಿದ್ಲು.

"ನಿನ್ನ ಮಾತಿನಲ್ಲಿ ಲಾಜಿಕ್ಕೇ ಇಲ್ವಲ್ಲೇ? ಕಾಂಗ್ರೆ ಪಕ್ಷದ ರಾಜ್ಯ ನಾಯಕ ಆಗ್ಬೇಕಾದ್ರೆ ಕಡೇ ಪಕ್ಷ ಎಂ. ಎಲ್. ಎ. ಆದ್ರೂ ಆಗಿರಬೇಕು. ನಿನ್ನ ಸಂಜಯ್ ಖಾನ್ ಮುಂಬಯಿಯಲ್ಲಿ ಕಾಂಪೆನ್‌ಸೇಷನ್ ಕೊಡ್ತಾ ಕೂತಿದ್ದಾನೆ. ಅವನ್ಗೂ ಮುಖ್ಯ ಮಂತ್ರಿ ಪದವಿಗೂ ಎಲ್ಲಿಂದೆಲ್ಲಿಯ ಸಂಬಂಧ?"

"ಓಹೋ, ಮಹಾ ದೊಡ್ಡ ಮನಷ್ಯರು ಇವರು. ಲಾಜಿಕ್ ವಿಚಾರ ಮಾತಾಡ್ತಾರೆ. ಕೆಲಸದೋಳು ವರಾಂಡದ ಸ್ಪಾರ್ಟೆಕ್ ನೆಲಾನ ಚೆನ್ನಾಗಿ ಸಾರಿಸಿದ ಮೇಲೆ ಕೊಳೇ ಬೂಡ್ಸುಕಾಲಲ್ಲಿ ಅದರ ಮೇಲೆ ನಡೆದು ಗೋಕುಲಾಷ್ಟಮಿ ಮಾಡ್ತೀರಲ್ಲಾ ಅದು ಲಾಜಿಕ್ಕೋ?" ನನ್ನ ಪತ್ನಿಯ ಸವಾಲು.

"ಗೋಕುಲಾಷ್ಟಮಿಗೂ ಸಂಜಯ್ ಖಾನ್‌ಗೂ ಏನೇ ಸಂಬಂಧ?"

"ರೀ, ಸಂಜಯ್ ಖಾನ್ ಹೆಂಡ್ತಿ, ಸಾರಿಸಿರೋ ನೆಲಾನ, ಅವ ಎಂದೂ ಹೆಜ್ಜೆ ಗುರುತಿನಿಂದ ಕೊಳೆ ಮಾಡೋಲ್ಲ, ತಿಳೀರಿ. ಕರ್ನಾಟಕದ ಮುಖ್ಯ ಮಂತ್ರಿ ಸ್ಥಾನಕ್ಕೆ ನಾನಂತೂ ಸಂಜಯ್ ಖಾನ್‌ಗೇ ಓಟು ಹಾಕೋದು."

ಇದಕ್ಕೆ ನನ್ನ ಬಳಿ ಉತ್ತರ ಇರಲಿಲ್ಲ. ಹೆಂಗಸರ ಹತ್ರ ಮಾತಾಡೊವಾಗ ಹುಷಾರಾಗಿ ಇರ್ಬೇಕು. ವಾದದಲ್ಲಿ ಸೋತ್ರೂ ಪರವಾಗಿಲ್ಲ. ರಾತ್ರಿ ಊಟಕ್ಕೆ ಅವರೇಕಾಳು ಹುಳಿ, ಹುರುಳೀ ಹಪ್ಪಳ ಸಿಗುತ್ತಲ್ಲ. ವಾದ ಗೆದ್ದು ಬ್ರೆಡ್ ತಿನ್ಕೊಂಡು ಇರೋಕ್ಕಾಗುತ್ಯೇ?

ರಂಭೆಯ ಅಳಲು

ಕಲ್ಪವೃಕ್ಷಕೆ ನಮಿಸಿ ಹೇಳಿದಳ್ ರಂಭೆ
"ಜೋಡಿಯಿಲ್ಲದ ವಿರಹದಳಲನೇನೆಂಬೆ
ಹೊಸಬರೇ ಬರುತಿಲ್ಲ
ಹಳಬರೋ ಸರಿಯಿಲ್ಲ
ಇಂದ್ರನಿಗೆ ಏಯ್ಡ್ಸ್, ಬೃಹಸ್ಪತಿ ಬೆದರುಗೊಂಬೆ"

—ಅ. ರಾ. ಸೇ.



"ಯಾಕೆ ಯೋಚ್ನೆ ಮಾಡ್ತಿ ಗುರೂ. ಮುಂದಿನ ಚುನಾವಣೆಗೆ ಪಾದುಕೆ ಗುರ್ತನ್ನ ಇಟ್ಕೊ. ಯಾರು ಗೆದ್ದು ಬಂದ್ರೂ ಅವರ್ದೇ ಪಾದುಕೆ ಅಂತ ಯೇಳ್ಕೊಬೌದು"

ನಾಟಕ ವಿಮರ್ಶೆ

ಟ್ವಿಂಕಲ್ ತಾರಾ

—ಸೀನ

ನೀರಿನ ಬವಣೆ, ಲೋಡ್ ಷೆಡಿಂಗ್, ಪರಾತ್ಪನ ಕಾಣಿಸಿಕೊಳ್ಳುವ ಗಲಭೆ, ಅಶಾಂತಿ ಈ ತಾಪತ್ರಯಗಳ ನಡುವೆ ಒಂದೆರಡು ತಾಸು ನಿರ್ಯೋಚನೆಯಿಂದ ಕುಳಿತು ನಾಟಕವನ್ನು ನೋಡುವ ಅವಕಾಶ ಬೆಂಗಳೂರಿನಲ್ಲಿ ಸಾಮಾನ್ಯವೇನಲ್ಲ. ಡೆಕ್ಕನ್ ಹೆರಾಲ್ಡ್ ನಾಟಕೋತ್ಸವದ ದೆಸೆಯಿಂದ ಒಳ್ಳೆಯ ನಾಟಕವೊಂದನ್ನು ಚೌಡಯ್ಯ ಹಾಲ್‌ನಲ್ಲಿ ನೋಡುವ ಅವಕಾಶ ಒದಗಿ ಬಂತು.

ಟ್ವಿಂಕಲ್ ತಾರಾ (ರಚನೆ, ನಿರ್ದೇಶನ....ಮಹೇಶ್ ದತ್ತಾನಿ) ಎರಡು ಅಂಕಗಳ ನಾಟಕ. ನಾಟಕದ ಕರ್ತೃವೊಬ್ಬ ಟೈಪ್‌ರೈಟರ್ ಮುಂದೆ ಕುಳಿತು ನಾಟಕವೊಂದನ್ನು ಬರೆಯಲು ಯತ್ನಿಸುವ ದೃಶ್ಯದೊಂದಿಗೆ ನಾಟಕ ಪ್ರಾರಂಭವಾಗುತ್ತದೆ. ಆರು ವರ್ಷಗಳ ಹಿಂದೆ ಅಸು ನೀಗಿದ ತನ್ನ ಅವಳಿ ತಂಗಿ(ತಂಗಿ ಅಲ್ಲ ಸಹೋದರಿ)ಯ ಸ್ಮರಣೆ ಸುರುಳಿ ಸುರುಳಿಯಾಗಿ ಮನದಲ್ಲಿ ಮೂಡುತ್ತಿದ್ದಂತೆ, ಆ ದೃಶ್ಯಗಳು ವೇದಿಕೆಯ ಮುಂಭಾಗದಲ್ಲಿ ರೂಪುಗೊಳ್ಳುವ ತಂತ್ರ ನಿಜವಾಗಿಯೂ ನವ್ಯತೆಯಿಂದ ಕೂಡಿತ್ತು.

ಕಥಾ ವಸ್ತು ಸರಳ. ತಾರಾ ಮತ್ತು ಚಂದನ್ ಸಯಾಮೀ ಅವಳಿಗಳಾಗಿ ಹುಟ್ಟಿದ್ದು, ದೀರ್ಘ ಶಸ್ತ್ರ ಚಿಕಿತ್ಸೆಯ ಅನಂತರ, ಒಂದೊಂದು ಕಾಲನ್ನು ಹಂಚಿಕೊಂಡು ಬೇರ್ಪಡುತ್ತಾರೆ. ಈ ಅಂಗ ಹೀನ ಹಾಗೂ ಸೂಕ್ಷ್ಮ ಆರೋಗ್ಯದ ಮಕ್ಕಳನ್ನು ಬೆಳೆಸುವಾಗ ಅನುಭವಿಸುವ ಮಾನಸಿಕ ಒತ್ತಡದಿಂದಾಗಿ ತಾಯಿ ಭಾರತಿ ತಾನೇ ಮನಸ್ಸಿನ ಸ್ವಾಸ್ಥ್ಯವನ್ನು ಕಳೆದುಕೊಳ್ಳುವಂತಾಗುತ್ತಾಳೆ. ತಾರುಣ್ಯ ತಲುಪುವ ಹೊತ್ತಿಗೆ ತಾರಾಳ ಆರೋಗ್ಯ ತೀರಾ ಹದಗೆಡುತ್ತಾ ಬರುತ್ತದೆ. ಸಾವು ಸನ್ನಿಹಿತ ಎಂಬುದನ್ನು ತಿಳಿದೂ, ತಾರಾ ಜೀವನವನ್ನು ಇದಿರಿಸುವ ಛಲ, ಅದರ ಬಗ್ಗೆ ಇರುವ ಗೌರವ ಹಾಗೂ ಆಸಕ್ತಿ ಇವು ನಾಟಕದಲ್ಲಿ ಚೆನ್ನಾಗಿ ಮೂಡಿ ಬಂದಿವೆ.

ಸಾವಿನ ಅಂಚಿನಲ್ಲಿರುವ ಮಗುವಿನ ತಂದೆ ತಾಯಿಯರ ಅಸಹಾಯಕ ಪರಿಸ್ಥಿತಿ, ಅವರ ಮಾನಸಿಕ ತುಮುಲ, ಮಕ್ಕಳ ಸಂವೇದನಾಶೀಲ ಪ್ರವೃತ್ತಿ ಇವುಗಳು

ನೋಟಕರ ಹೃದಯ ಮುಟ್ಟುವುದರಲ್ಲಿ ಯಶಸ್ವಿಯಾಗಿವೆ. ನಾಟಕದ ಕೊನೆಯಲ್ಲಿ ತಂದೆ ತನ್ನ ಮಕ್ಕಳಿಂದ ಮರೆಮಾಚಿದ್ದ ಅಪ್ರಿಯ ಸತ್ಯವೊಂದನ್ನು ನುಡಿದು, ಅವರೊಡನೆ ಹೊಸ ಬಾಂಧವ್ಯವೊಂದನ್ನು ನಿರ್ಮಿಸಿಕೊಳ್ಳುವ ದೃಶ್ಯ ಮನ ಮಿಡಿಯುವಂತಿತ್ತು.

ಚಂದನ್ ಪಾತ್ರದಲ್ಲಿ ಸಾಲ್‌ಮಿನ್ ಷರೀಫ್ ಹಾಗೂ ತಾರಾ ಪಾತ್ರದಲ್ಲಿ ನೇಹಾ ಶರ್ಮ ಉತ್ತಮ ಅಭಿನಯ ನೀಡಿದ್ದಾರೆ. ಭಾರತಿ ಪಾತ್ರ ವಹಿಸಿದ ಅಲ್ಕಾ ಅವರ ಅಭಿನಯ ಹಲವೆಡೆ ಅತಿ ಭಾವುಕತೆಯಿಂದ ಕೂಡಿ ಆಭಾಸ ಎನಿಸಿತ್ತು.

ಒಟ್ಟಿನಲ್ಲಿ ಒಳ್ಳೆಯ ಮನರಂಜನೆಗೆ ಕ್ಷಾಮ ಇರುವ ಈ ದಿನಗಳಲ್ಲಿ ಟಿ.ವಿ.ಯ **Soap opera**ಗಳ ಬದಲು ಒಂದು ಒಳ್ಳೆಯ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಸಮಾಧಾನ ಕೊಟ್ಟ ನಾಟಕ "ಟ್ವಿಂಕಲ್ ತಾರಾ".

ಶ್ರೀ-ಮತಿ

ಕನ್ನಿಕೆಗೆ ಬೇಗ ಶ್ರೀಮತಿಯಾಗುವಳಲು
ಶ್ರೀಯಂತ ಕುಮಾರನನು ಜೊತೆಗೂಡಿಕೊಳಲು
ಮರಗಿಡಗಳನು ಸುತ್ತಿ
ಸಂದೇಶಗಳ ಕೆತ್ತಿ
ಶ್ರೀಯನವ ಕಳಕೊಂಡ ಮತಿಯನವಳು

—ಅ. ರಾ. ಸೇ.

ಪ್ರಣಯದ ಹೊಂಗನಸುಗಳು

—ಸಾವಿತ್ರಿ

ಸುಪ್ರಸಿದ್ಧ ಲೇಖಕಿ ಜ್ಯೋತ್ಸ್ನಾ ಸಪ್ತರತ್ನರಾವ್ ಅವರ ಹೊಚ್ಚ ಹೊಸ ಕಾದಂಬರಿ "ಪ್ರಣಯದ ಹೊಂಗನಸುಗಳು" ಅತಿ ಸ್ವಾರಸ್ಯಕರವಾಗಿದ್ದು, ಎಕ್ಸ್‌ಪ್ರೆಸ್ ವೇಗದಲ್ಲಿ ಓದಿಸಿಕೊಂಡು ಹೋಗುತ್ತದೆ. ಕಥಾ ವಸ್ತು ಸ್ಥೂಲವಾಗಿ ಹೀಗಿದೆ

ಅರುಣ ಕಾಲೇಜ್ ತರುಣ. ಚಿತ್ರಾ ಅರುಣನ ಫಿಲಾಸಫಿ ಮೇಡಂ. ಒಮ್ಮೆ ಚಿತ್ರಾ ಮತ್ತು ಅರುಣ ಕಬ್ಬನ್ ಪಾರ್ಕ್‌ನಲ್ಲಿ ಭೇಟಿಯಾಗಿ........ನಡೆಸುತ್ತಾರೆ. ಅನಂತರ ಅರುಣ ಚಿತ್ರಾಳ ಮನೆಗೆ ಬಂದು ಡ್ರಾಯಿಂಗ್ ರೂಮ್‌ನಲ್ಲಿ ಮತ್ತೆ........ ಅಷ್ಟು ಹೊತ್ತಿಗೆ ಚಿತ್ರಾಳ ತಂಗಿ ಸುಧಾ ಅಲ್ಲಿಗೆ ಬರುತ್ತಾಳೆ. ಲಾಲ್ ಬಾಗ್‌ನಲ್ಲಿ ಸುಧಾ ಅರುಣನೊಡನೆ ವಾಯು ಸಂಚಾರಕ್ಕೆ ಹೊರಟು.... ಸುಧಾ ಬೇರುತ್ತಾ ಎಂ.ಟಿ.ಆರ್ ಒಳಗೆ ಓಡುತ್ತಾಳೆ. ಅಲ್ಲಿ ಅರುಣನ ತಮ್ಮ ಗುಂಗುರು ಕೂದಲಿನ ಮೋಹನ ಮಸಾಲೆ ದೋಸೆಗೆ ಕ್ಯೂನಲ್ಲಿ ಕಾಯುತ್ತಾ ನಿಂತಿರುತ್ತಾನೆ. ಸುಧಾಳ ಮಂದ ನಗೆ ಮೋಹನನನ್ನು ಹುಚ್ಚನಾಗಿಸುತ್ತದೆ. ಅಲಸೂರು ಕೆರೆಯ ಬಳಿ ಮೋಹನ ಸುಧಾಳೊಡನೆ....... ಪ್ರೇಮ ವಿವಾಹದ ಅನಂತರ ಶಾಂತಮ್ಮ ಸೊಸೆ ಸುಧಾಳನ್ನು ಸುಡಲು ಸೀಮೆ ಎಣ್ಣೆ ಶೇಖರಿಸಲು ಪ್ರಾರಂಭಿಸುತ್ತಾರೆ. ಆದರೆ ಪಾಪ! ಸೀಮೆ ಎಣ್ಣೆ ಸಿಕ್ಕದೆ ಶಾಂತಮ್ಮ ಕಂಗಾಲು. ಕಾಲೇಜ್ ಪ್ರಿನ್ಸಿಪಾಲ್ ಮುತ್ತಣ್ಣ ಅಕಸ್ಮಾತ್ ಶಾಂತಮ್ಮ ಅವರನ್ನು ದಾರಿಯಲ್ಲಿ ಸಂಧಿಸಿ...........ಶಾಂತಮ್ಮ ಅವರ ಪೆಚ್ಚು ಮುಖದಲ್ಲಿ ಇತ್ತೀಚೆಗೆಏನೋ ಒಂದು ಉಲ್ಲಾಸ.

ಈ ಕಾದಂಬರಿಯ ಒಂದೇ ಕೊರತೆ ಎಂದರೆ 230 ನೇ ಪುಟಕ್ಕೆ ಕಾದಂಬರಿ ಹಠಾತ್ತನೆ ನಿಲ್ಲುತ್ತದೆ. ಲೇಖಕಿ ಅವರನ್ನು ಇದಕ್ಕೆ ಕಾರಣ ಕೇಳಿದಾಗ ಅವರು ನೀಡಿದ ಉತ್ತರ:

"ಈ ವರ್ಷದ ಕೊನೆಗೆ ನಾನು ತಲಾ 230 ಪುಟಗಳ 50 ಕಾದಂಬರಿಗಳ ಮಾಲೆಯೊಂದನ್ನು ವಾಗ್ದೇವಿಗೆ ಅರ್ಪಿಸಬೇಕೆಂದಿದ್ದೇನೆ. ನನ್ನ ಕೆಲಸದಲ್ಲಿ ನಿಖರತೆ ಇರುವುದರಿಂದ ಪುಟ ಸಂಖ್ಯೆಯನ್ನು ಮೀರುವಂತಿಲ್ಲ.



"ರಾಮ್ ಮಂದ್ರ ಕಟ್ಸಿದ್ರೆ ಅದ್ರ ಮುಂದೆ ನಾವು ಕುಂತ್ಕಳ್ಳಾಕೆ ಬಿಡ್ತಾರೇನ್ಲಾ?"

ಏಳೋ ಕಂದ

(To Ramesh) —ಅ. ರಾ. ಸೇ.

ಕೇಳಿದೆಯಾ ಅವರಾಡುವ ಮಾತ?
ಕನ್ನಡ ಉಳಿವುದೊ ಹೊಡೆವುದೊ ಗೋತಾ
ವಿಜ್ಞಾನವ ಮೇಣ್ ತಂತ್ರಜ್ಞಾನವ
ಅರಿಯಲು ಇಂಗ್ಲಿಷ್ ಬೇಕೇಬೇಕು
ರಾಷ್ಟ್ರ ಭಾಷೆ ಒಕ್ಕೂಟಕೆ ಬೇಕು
ಸೋದರ ನುಡಿಗಳು ತಮಿಳು ತೆಲುಗು
ಕನ್ನಡ ಲಿಪಿ ಮರೆಯಾಗುವ ಗುಸುಗು
ಕನ್ನಡಕೆಲ್ಲಿದೆ ಕೂಡಲು ಜಾಗ?
ಹಲವೇ ವರ್ಷಕೆ ಅಡುಗೆಯ ಮನೆಯೇ
ಕನ್ನಡಕ್ಕೆ ಉಳಿವುದು ಏನಾಗ?
ಎನುವರೊಬ್ಬ ಇಂಗ್ಲೀಷು ಪಂಡಿತರು
ಸಾಹಿತ್ಯದ ಶಿಖರದಿ ಮಂಡಿತರು
ಅದು ಖಂಡಿತವೇ ಯೋಚಿಸಿ ನೋಡಿ
ಅಂಕಲ್ ಆಂಟಿ ಮಮ್ಮಿ ಡ್ಯಾಡಿ
ಈಗಲೆ ಅಡಿಗೆಯ ಮನೆಯಲಿ ಕೂಡಿ
ಕುಳಿತಿರುವರು ಕನ್ನಡವನು ಕಾಡಿ.
ಹೋರಾಡುವೆ ನೀನಿನ್ನೆಲ್ಲಿಂದ
ನ್ಯೂಫೌಂಡ್‌ಲೆಂಡ್ ನ್ಯೂಜಿಲೇಂಡಿಂದ
ಎಲ್ಲಿಂದ—ಯಾ—ವಲ್ಲಿಂದ
ಗಂಗೆಯ ಕೊಳೆಯನು ತೊಳೆಯುವರಾರು
ನದಿಯಲಿ ಕೊಳಚೆಯ ಬಿಟ್ಟವರು
ಕನ್ನಡವನು ಉದ್ಧರಿಸುವರಾರು
ಕನ್ನಡವನು ಕೈ ಬಿಟ್ಟವರು.
ಏಳೋ ಎಚ್ಚರಗೊಳ್ಳೋ ಕಂದ
ಕನ್ನಡ ಉಳಿದರೆ ಅದು ನಿನ್ನಿಂದ
ಹೋರಾಡೋ ನರ್ಸರಿಯಿಂದ
ಹಿತ್ತಿಲ ಬಾಗಿಲ ಹಿಂಬದಿಯಿಂದ

ರಕ್ಷೆ

—ಹಾ. ಮ್ಯ. ಸೂರಿ

ದಂಪತಿಗಳಂತೆ ನಾವಿಬ್ಬರು
ಕುಟುಂಬ ಯೋಜನೆಯಂತೆ
ನಮಗಿಬ್ಬರಿಲ್ಲ
ಅಷ್ಟೇಕೆ
ಒಬ್ಬರೂ ಇಲ್ಲಾ ಸ್ವಾಮಿ!

ಒಬ್ಬರನೊಬ್ಬರು ಮಾತ್ರ
ಬಿಟ್ಟಿರುವುದಿಲ್ಲ
ಬಿಟ್ಟರೆ—ನಾಚಿಕೆಗೇಡು ನಿಮಗೇ!

ಭಾಷೆ, ಜಾತಿ,
ಗಂಡು, ಹೆಣ್ಣು
ಕಿರಿಯ, ಹಿರಿಯ
ಮೇಲು, ಕೀಳು
ಎಂಬ ಭೇದಭಾವವಿಲ್ಲ

ನಿಮ್ಮ ಸೇವೆಗೆ
ನಾವಿಬ್ಬರು
ಒಬ್ಬರನ್ನು ಬಿಟ್ಟು
ಇನ್ನೊಬ್ಬರಿಲ್ಲ!
ಒಬ್ಬರನೆ ಬಿಟ್ಟೀರ ಜೋಕೆ
ನಾವೇ ನಿಮ್ಮ—ಪಾದರಕ್ಷೆ



ಕೊರವಂಜಿಯಿಂದ

ಶೀನಣ್ಣನೂ, ವಿಧಿಯೂ

—ಅ.ರಾ.ಸೇ.

ಸೂರಪ್ಪನಿಗೆ ಸೈಕಲ್ ಕಲಿಸಿದ್ದು

ಶೀನಣ್ಣ ೧೯೩೦ರಲ್ಲಿ ಸೈಕಲ್ ತೆಗೆದುಕೊಂಡ. ಅದೊಂದು ೧೯೧೮ ಮಾಡಲ್ ಫೀನಿಕ್ಸ್, ಸೈಜು ೨೬ ಇಂಚು. ಅದಕ್ಕಿದ್ದುದು ಸ್ಪ್ರಿಂಗ್ ಸೀಟು. ಶೀನಣ್ಣ ಕೊಂಡಾಗ ಆ ವಾಹನದ ಯೌವನ ಆಗಲೇ ಮುಗಿದುಹೋಗಿತ್ತು. ಶೀನಣ್ಣ ಅದಕ್ಕೆ ಎರಡು ಲೋಕಲ್ ಮೇಡ್ ಕಾಟರ್ ಪಿನ್ನುಗಳನ್ನೂ, ಸೀಟಿಗೆ ಅವರಪ್ಪನ ನೀರು ಪಂಚೆಯನ್ನೂ ಕೂಡಿಸಿದ ನಂತರವೇ ಅದು ಯಾನಕ್ಕೆ ಸಿದ್ಧವಾದದ್ದು. ಶೀನಣ್ಣ ಆಗ ನಮ್ಮೂರಿನಲ್ಲಿ ಕಾಂಗ್ರೆಸ್ ಸಂಸ್ಥೆಯನ್ನು ಸ್ಥಾಪಿಸಿದ್ದ. ಅದರ ಕೆಲಸಗಳಿಗೆ ಅನುಕೂಲವಾಗಲೆಂದೇ ಅವನು ಸೈಕಲ್ ಕೊಂಡ. ಬೆಲೆ ೧೫ ರೂ. ಮಾತ್ರ.

ಅದನ್ನು ಅವನು ಮೊದಲ ಬಾರಿ ಊರಿನಲ್ಲಿ ಸವಾರಿ ಮಾಡಿದ ಸಮಾರಂಭ ಅಭೂತಪೂರ್ವವಾದುದು. ಓಬಳಿಗ ಕಂಟಕನಾದದ್ದೂ, ಬುಡ್ಡು ತಲೆ ಒಡೆದುಕೊಂಡದ್ದೂ ಆಗಲೇ. ಆಗ ಸತ್ತ ಮೂರು ಕೋಳಿಪಿಳ್ಳೆಗಳನು ಜನ ಆಗಲೇ ಮರೆತಿದಾರೆ. ಆದರೂ ಅದು ಯಶಸ್ವೀ ಯಾನ. ನಂತರ ಶೀನಣ್ಣ ಸೈಕಲ್ ಸವಾರಿಯನ್ನು ಶಂಕರಣ್ಣನಿಗೆ ಕಲಿಸಿದ. ಆ ದಿನ ನಮ್ಮ ಅಪ್ಪ ಮೃತ್ಯುಂಜಯ ಜಪ ಮಾಡಿದ—ಶಾಂತ್ಯರ್ಥವಾಗಿ. ಶೀನಣ್ಣ ಊರ ಪುರೋಹಿತ ಶಂಕರಣ್ಣ ನನ್ನ ಖಾಸಾ ಅಣ್ಣ ಜೋಯ್ಸರ ಶೀನ ತಲೆ ಒಡೆದುಕೊಂಡರೆ ಅಪ್ಪ ಅಬ್ಜೆಕ್ಟ್ ಮಾಡಲು ಹೋಗುವಂತಿರಲಿಲ್ಲ. ಅಪ್ಪ ಆಗ ನಕ್ಕಿದ್ದ. ಆದರೆ ಅದು ಅವನ ಮಗನಿಗೇ ಬರುವುದೆಂದು ಅವ ಎಣಿಸಿರಲಿಲ್ಲ.

ಆಗ ಸೂರಪ್ಪ ಬೆನ್ನೂರಿನಲ್ಲಿ ಮೇಷ್ಟರಾಗಿದ್ದ. ಬೆನ್ನೂರು ನಮ್ಮೂರಿಗೆ ಐದು ಮೈಲಿ ದೂರದಲ್ಲಿದೆ. ಅಲ್ಲಿಗೆ ಓಡಾಡುವುದು ಅವನಿಗೆ ಬಲು ಕಷ್ಟವಾಗಿತ್ತು. ಹೊತ್ತಿಗೆ ಹೋಗುವುದು ಕನಸಿನ ಬುತ್ತಿ. ಬೆನ್ನೂರು ರೋಡ್‌ಸೈಡ್ ಹಳ್ಳಿ.

ಇನ್ಸ್‌ಪೆಕ್ಷನ್, ಸರ್‌ಪ್ರೈಸ್ ವಿಸಿಟ್ ಯಾವಾಗ ಎಂದರೆ ಆಗ ಘಟಿಸಬಹುದು. ಆದುದರಿಂದ ಸೂರಪ್ಪ ಸೈಕಲ್ ಕಲಿಯಲು ನಿರ್ಧರಿಸಿದ. ಶೀನಣ್ಣ ಸೈಕಲ್ ಕಲಿಸುವೆನೆಂದು ಆಶ್ವಾಸನೆ ಇತ್ತ.

ಶೀನಣ್ಣ ಸೈಕಲ್ ತಂದದ್ದು ಉದ್ರೈ ಮೇಲೆ. ಅವನಪ್ಪ. ವೆಂಕಪ್ಪ ದುಡ್ಡು ಕೊಡಲು ನಿರಾಕರಿಸಿದ. ಅಲ್ಲದೆ ಯಾರೂ ಇಲ್ಲದಾಗ ವೆಂಕಪ್ಪ ಸೈಕಲ್ ಹತ್ತಲು ಯತ್ನಿಸಿ ಕಡಿದುಕೊಂಡು ಬಿದ್ದ. ಆ ಸಮಯದಲ್ಲೇ ತಳವಾರ ತಿಪ್ಪಿ, ಗೊಲ್ಲರ ನಾಗಿ ಅಲ್ಲಿಗೆ ಬರಬೇಕೇ? ವೆಂಕಪ್ಪ ಆ ಸೈಕಲ್ಲನ್ನು ಕೆರೆಗೆಸೆದು ಬಾ ಎಂದು ಶೀನಣ್ಣನನ್ನು ಬಲಾತ್ಕರಿಸುತ್ತಿದ್ದ. ಹೀಗಾಗಿ ಆ ಸೈಕಲ್ಲನ್ನು ಮಾರಲು ಶೀನಣ್ಣ ನಿರ್ಧರಿಸಿದ. ಅದನ್ನು ಕೊಂಡುಕೊಳ್ಳಲು ಸೂರಪ್ಪ ಒಪ್ಪಿದ್ದರಿಂದಲೇ ಶೀನಣ್ಣ ಸೂರಪ್ಪನಿಗೆ ಆಶ್ವಾಸನೆ ಕೊಟ್ಟಿದ್ದು.

ಆದರೆ ಸೂರಪ್ಪನ ಎತ್ತರ ಕೇವಲ ನಾಲ್ಕೂವರೆ ಅಡಿ. ಅವನು ಸೈಕಲ್ ಹತ್ತುವುದು ಹೇಗೆ? ಶೀನಣ್ಣ ಇದಕ್ಕೊಂದು ಪರಿಹಾರ ಕಂಡುಹಿಡಿದ. ಸೂರಪ್ಪ ನಮ್ಮ ಮನೆಯ ಮುಂದಿನ ಬೇವಿನ ಕಟ್ಟೆಯಿಂದ ಸೈಕಲ್ಲನೇರಲು ಆರಂಭಿಸಿದ. ಅವನ ಬೆಂಗಾವಲಿಗೆ ಶೀನಣ್ಣ, ಶಂಕರಣ್ಣ ಇಬ್ಬರೂ. ಮಕ್ಕಳು ಯಾರೂ ಆ ದಾರಿಯಲ್ಲಿ ಸುಳಿಯಕೂಡದೆಂದು ಕಟ್ಟಪ್ಪಣೆ ಆಯ್ತು.

ಆದರೆ ವಿಧಿಯ ನಿರ್ಧಾರ ಇದಕ್ಕೆ ವಿರುದ್ಧವಾಗಿತ್ತು. "ಸೂರಪ್ಪ ಸೈಕಲ್ ಕಲಿಯುವಂತೆಯೇ ಇಲ್ಲ" ಎಂಬುದೇ ವಿಧಿ ಸಂಕಲ್ಪ. ಶೀನಣ್ಣ ಇದನ್ನೆಲ್ಲಾ ಪ್ಲ್ಯಾನ್ ಮಾಡುವವನಲ್ಲ. ಒಂದೂವರೆ ವಾರದೊಳಗಾಗಿ ಸೂರಪ್ಪ ತಾನೇ ಸೈಕಲ್ಲನೇರು ವಂತಾದ. ಸೂರಪ್ಪ ತಾನೊಬ್ಬನೇ ಸೈಕಲ್ ಹತ್ತಿ ಮೊದಲ ಬಾರಿ ಸವಾರಿ ಮಾಡಿದಾಗ ಆ ಶಕಟ ನೇರವಾಗಿ ದೊಡ್ಡ ಕೆರೆಯಂಗಳಕ್ಕೆ ಹೋಯ್ತು. ಅಲ್ಲಿದ್ದವರೆಲ್ಲಾ ದಿಕ್ಕಾಪಾಲಾಗಿ ಓಡಿದರು. "ಸೂರಪ್ಪಾ, ಟರ್ನ್ ಮಾಡಿಕೋ" ಎಂದರು ಹಿಂದೆ ದೂರದಲ್ಲಿ ಓಡಿ ಬರುತ್ತಿದ್ದ ಶೀನಣ್ಣ, ಶಂಕರಣ್ಣ. "ಸ್ಟಾಪ್, ಸ್ಟಾಪ್" ಎಂದ ಶಂಕರಣ್ಣ. ಸೂರಪ್ಪ ಸೀದಾ ನೀರಿಗೆ ನುಗ್ಗಿದ.

ಮರು ದಿನ ಐಮಂಗಲ ಖಾದಿ ಕೇಂದ್ರದಲ್ಲಿ ಖಾದೀ ಟ್ರೈನಿಂಗ್ ಪಡೆಯಲು ಹೋಗಿಬಿಟ್ಟರು ಶೀನಣ್ಣ, ಶಂಕರಣ್ಣ. ಸೂರಪ್ಪ ಸೈಕಲ್ ಕೊಂಡುಕೊಂಡ.

ಅಭಿಮನ್ಯು, ಚಕ್ರವ್ಯೂಹವನ್ನು ಹೊಕ್ಕುವುದನ್ನು ಮಾತ್ರ ಕಲಿತನಂತೆ. ಹಿಂತಿರುಗಿ ಬರುವುದನ್ನರಿತಿರಲಿಲ್ಲವಂತೆ. ಸೂರಪ್ಪನೂ ಹಾಗೇ; ಬೇವಿನ ಕಟ್ಟೆಯಿಂದ ಸೈಕಲ್ ಹತ್ತಿ ಸವಾರಿ ಮಾಡುವುದನ್ನು ಮಾತ್ರ ಕಲಿತ. ಇಳಿಯುವುದನ್ನಾಗಲೀ, ಲೆಫ್ಟ್, ರೈಟ್, ಎಬೌಟ್ ಟರ್ನ್‌ಗಳನ್ನಾಗಲೀ ಕಲಿಯಲೇ ಇಲ್ಲ. ಸೂರಪ್ಪ ಶೀನಣ್ಣನಿಗೆ ಕಾಗದ ಬರೆದ.

ಶೀನನಿಗೆ ಆ॥ಗಳು.

ಅಲ್ಲಲೇ ಶೀನ; ನಡು ನೀರಲ್ಲಿ ಕೈ ಬಿಟ್ಟು ಹೋದೆ. ಸೈಕಲ್ ಹತ್ತುವುದನ್ನು ಮಾತ್ರ ಕಲಿಸಿ ಹೋದೆ. ಇಳಿಯುವುದು ಬರುವುದೇ ಇಲ್ಲ. ಎಲ್ಲರೂ, ನನ್ನನು ನೋಡಿದಾಗಲೆಲ್ಲ, "ಯಾಕೆ ಸೂರಪ್ಪ, ಸೈಕಲ್ ಇದ್ದೂ ಇದ್ದೂ ನಡೆದು ಹೋಗುತ್ತೀ?" ಎಂದು ಕೇಳುತ್ತಿದ್ದಾರೆ. ಜರೂರು ಕಾಗದ ಬರೆ. ಸೈಕಲ್ ಇಳಿಯು ವುದು ಹೇಗೆ ಎಂಬುದನ್ನು ವಿವರವಾಗಿ ತಿಳಿಸು.

ಇ।ಆ।ಗಳು,

ಸೂರಪ್ಪ.

ಉತ್ತರ ಹೀಗೆಂದು ಬಂತು.

ಸೂರಪ್ಪನವರ ಪಾದ ಪದ್ಮಂಗಳಲ್ಲಿ ಶಿರ ಸಾಷ್ಟಾಂಗ ನ।ಗಳು.

ತರುವಾಯ ಉ.ಕು.ಸಾಂ. ಅಲ್ಲ ಸೂರಪ್ಪಾ ಅದು ಗೊತ್ತಿಲ್ವೇ ? ಲೆಫ್ಟ್ ಬ್ರೇಕು ಮೊದಲು ಹಾಕು. ರೈಟ್ ಹಾಕಬೇಡ. ಆ ಮೇಲೆ ಲೆಫ್ಟ್ ಪೆಡಲಿನ ಮೇಲಿನ ಲೆಫ್ಟ್ ಕಾಲನ್ನು ಹಾಗೇ ಇಟ್ಟು, ರೈಟನ್ನು ಕ್ಯಾರಿಯರ್ ಮೇಲೆ ಅಥವಾ ಸೀಟಿನ ಮುಂದೆ ಎತ್ತಿ ಲೆಫ್ಟಿಗೆ ತಂದು ನೆಲಕ್ಕಿಡು. ಇಲ್ಲದಿದ್ದರೆ ಲೆಫ್ಟಿಗೆ ವಾಲಿ ಲೆಫ್ಟ್ ಲೆಗ್ಗನ್ನು ನೆಲದ ಮೇಲೆ ಇಟ್ಟು, ಗಕ್ಕನೆ ಬ್ರೇಕ್ ಹಾಕಿ ರೈಟನ್ನು ಆ ಮೇಲೆ ಈಚೆಗೆ ತಾ. ದೇವರು ಶುಭವನ್ನು ಮಾಡಲಿ.

ಇ।ನ।ಗಳು,

ಶೀನ.

ಸೂರಪ್ಪ ಕನ್ನಡ ಲೋಯರ್ ಸೆಕೆಂಡರಿ ಮಾತ್ರ ಪಾಸಿದವನು. ಅವನಿಗೆ ಶೀನಣ್ಣನ ಕಾಗದ ಗೋಡೆಯಾಯ್ತು. ನಂತರ ಅವನು ತನ್ನದೇ ಆದೊಂದು ನವೀನ ವಿಧಾನ ಕಂಡುಹಿಡಿದ. ಬೆನ್ನೂರಿನ ಶಾಲೆ ಹುಡುಗರಲ್ಲಿ ನಾಲ್ಕು ಜನ ಬಲವಾದ

ಹುಡುಗರು ಊರಿನಿಂದ ಈಚೆ ರಸ್ತೆ ಪಕ್ಕದಲ್ಲಿ ಬಂದು ನಿಲ್ಲುವಂತೆ ಏರ್ಪಾಟು ಮಾಡಿದ. ಸೂರಪ್ಪ ಸೈಕಲ್ ಹತ್ತಿ ಬರುತ್ತಿದ್ದ—ಬೆಳಿಗ್ಗೆ ಆರೂ ಮುಕ್ಕಾಲಿಗೆ. ಸೂರಪ್ಪನ ಸೈಕಲ್ ಹಿಡಿದು, ತಳ್ಳಿ ನಿಲ್ಲಿಸುತ್ತಿದ್ದರು—ಹುಡುಗರು. ಅಲ್ಲಿಂದ ವಾಪಸ್ ನಮ್ಮೂರಿಗೆ ಬಂದಾಗ, ನಮ್ಮೂರಿನ ಹೊರಗೆ ಸೈಕಲ್ ತಳ್ಳುವ ಕೆಲಸ ಬೊಮ್ಮನಿಗೆ ವಹಿಸಿಕೊಡಲ್ಪಟ್ಟಿತ್ತು.

ಹೀಗಿರುವಾಗ ಒಂದು ದಿನ D. E. O. ಸಾಹೇಬರು ಬೆನ್ನೂರು ಶಾಲೆಗೆ ಸರ್‌ಪ್ರೈಸ್ ವಿಸಿಟ್ ಕೊಟ್ಟರು. ಅವರನ್ನು ನೋಡುವ ಕುತೂಹಲದಲ್ಲಿ ಹುಡುಗರು ಆ ದಿನ ರಸ್ತೆಗೆ ಬರಲೇ ಇಲ್ಲ.

ಆ ದಿನ ಸೂರಪ್ಪ ಎಂದಿನಂತೆ ಆರೂ ಮುಕ್ಕಾಲಿಗೆ ಬೆನ್ನೂರಿಗೆ ಬಂದ. ಹುಡುಗರು ಕಾಣಿಸಲಿಲ್ಲ. ಜಂಘಾ ಬಲ ಉಡುಗಿತು. ಕೂಗಿದ. ಯಾರೂ ಬರಲಿಲ್ಲ. "ಬರ್‍ರ್ಯೋ, ಹಿಡ್ಕಳ್‍ರ್ಯೋ" ಎಂದು ಅರಚಿದ. ಕಾಲುಗಳು ಯಾಂತ್ರಿಕವಾಗಿ ತುಳಿಯುತ್ತಲೇ ಇದ್ದವು. ನೋಡು ನೋಡುತ್ತಿದ್ದಂತೆ ಸೈಕಲ್ ಮುಂದುವರಿಯಿತು. ಸ್ವಲ್ಪ ಹೊತ್ತಿನಲ್ಲೇ ಸೂರಪ್ಪ ಕಾತರಾಳಿನ ದಾರಿಯನ್ನು ಉತ್ತರಿಸುತ್ತಿದ್ದ. ಕೆರೆ ಹಿಂಗಡೆಯು ದಿಗಂತದಲ್ಲಿ ಮರೆಯಾಯ್ತು. ಐಯನಹಳ್ಳಿ ಬಂತು. ರಸ್ತೆಯ ಪಕ್ಕದಲ್ಲಿ ಜನ ಓಡಾಡುತ್ತಿದ್ದರು. ನಾಲ್ಕಾರು ನಾಯಿಗಳು ಬೊಗಳುತ್ತಾ ಸೂರಪ್ಪನನ್ನು ಹಿಂಬಾಲಿಸಿದವು. 'ಹಿಡ್ಕೊಳ್‍ರ್ಯೋ, ಹಿಡ್ಕೊಳ್‍ರ್ಯೋ' ಎಂದು ಅವನು ಗೋಗರೆದ. ಜನ ನಾಯಿಗಳನ್ನು ಹಿಡಿದರೇ ಹೊರತು ಸೈಕಲ್ ಹಿಡಿಯಲಿಲ್ಲ. ಐಯನಹಳ್ಳಿ ಹಿಂದಾಯ್ತು. ಬಿಸಿಲು ಪ್ರಖರವಾಯ್ತು. ಸೂರಪ್ಪನ ಕಾಲುಗಳು ನೋಯುತ್ತಿದ್ದವು. ನಿಂತೀತೇನೋ ಎಂಬಾಸೆಯಿಂದ ಹ್ಯಾಂಡಲನ್ನು ಹಿಂದಕ್ಕೆ ಜಗ್ಗಿದ. ಲೆಫ್ಟನ್ನು ಒರಗಿಸಿ ರೈಟನ್ನು ಹಿಂದುಗಡೆಯಿಂದ ಲೆಫ್ಟಿಗೆ ತರುವುದೇ ಅವನ ಮುಂದಿದ್ದ ಸಮಸ್ಯೆ. ಬ್ರೇಕ್ ಯಾವುದು?

ಬ್ರೇಕನ್ನು ಅದು ಏನೆಂದು ತಿಳಿಯದೆ ಒತ್ತಿದ. ಆದರೆ ಬ್ರೇಕ್ ರಬ್ಬರ್ ಇರಲೇ ಇಲ್ಲ. ಸೂರಪ್ಪ ಶೀನನನ್ನು ಶಪಿಸಿದ, ವಿಧಿಯನ್ನು ಬೈದ. ಹೊಟ್ಟೆ ಸೂರಪ್ಪನನ್ನು ಶಪಿಸುತ್ತಿತ್ತು.

ಕೊನೆಗೆ ಚಿತ್ರದುರ್ಗ ಕಾಣಿಸಿತು. ಸೂರಪ್ಪ ಕುಳಿಯುತ್ತಿದ್ದ. 'ಹಿಡ್ಕೊಳ್‍ರ್ಯೋ ಸೈಕಲ್ನ' ಎಂದು ಕೂಗುತ್ತಲೂ ಇದ್ದ. ದುರ್ಗದ ನಾಯಿಗಳು ಸೂರಪ್ಪನ ಬೆನ್ನು ಹತ್ತಿದವು. ಜೊತೆಗೆ ಹುಡುಗರೂ.

The dogs did bark the children screamed. ಮಾರ್ಗದಲ್ಲೂ ಸೂರಪ್ಪನನ್ನು ಯಾರೂ ನಿಲ್ಲಿಸಲಿಲ್ಲ. ಸೈಕಲ್ ಹೋಯಿತು. ಹೋಯಿತು. ಮುಂದೆ ಬಸ್ಸುಗಳು ಬಂದಾಗ ಸೂರಪ್ಪ 'ಅಯ್ಯಯ್ಯೋ ಹೋದ್ನ್ರಪ್ಪ' ಎಂದು ಅರಚುತ್ತಿದ್ದ. ಬಸ್ಸುಗಳು ದಾರಿ ಬಿಟ್ಟು ಹೋದವು. ಹನ್ನೆರಡಾಗುತ್ತಾ ಬಂತು.

ಸೂರಪ್ಪ ತುಳಿಯುತ್ತಲೇ ಇದ್ದ. ಅವನಿಗೆ ಕಾಲ, ದೇಶ, ವರ್ತಮಾನಗಳೆಲ್ಲಾ ಮರೆತುಹೋದವು. ಅವನು ಹತಾಶನಾದ.

ಕೊನೆಗೆ ಯಾವುದೋ ಊರು ಬಂತು. ಸೂರಪ್ಪ ಮತ್ತೆ ಹಿಡ್ಕೊಳ್ರೊ ಭಜನೆ ಆರಂಭಿಸಿದ. ಅಷ್ಟರಲ್ಲಿ ದಾರಿಯ ಮಧ್ಯೆ ಎಮ್ಮೆ ಬಂತು. ಸೈಕಲ್ಲು ಅದಕ್ಕೆ ಡಿಕ್ಕಿ ಹೊಡೆದು ಬಲಕ್ಕೆ ತಿರುಗಿತು. ಈ ಮಧ್ಯೆ ಕ್ಲಚ್ ಫೇಲಾಯಿತು. ಸೂರಪ್ಪ ಕೊನೆಗಾಲ ಬಂತೆಂದು ಕಣ್ಣುಚ್ಚಿ ರಾಮ ಸ್ಮರಣೆ ಮಾಡಿದ.

ಎಚ್ಚರವಾದಾಗ ಶೀನಣ್ಣ, ಶಂಕರಣ್ಣ ಅವನನ್ನು ಉಪಚರಿಸುತ್ತಿದ್ದರು. ಅನಾಹುತ ನಡೆದುದು ಐಮಂಗಲದಲ್ಲೇ. ನಮ್ಮೂರಿಗೆ ಅದು 35 ಮೈಲು ದೂರ. ಆ ಸಂಜೆ ಸೂರಪ್ಪನಿಗೆ ಸೈಕಲ್ ಇಳಿಯುವುದನ್ನು ಹೇಳಿಕೊಡಲು ಶೀನಣ್ಣ ತೊಡಗಿದ. ಸೂರಪ್ಪ ಇನ್ನು ಸೈಕಲ್ಲನ್ನು ಕಣ್ಣೆತ್ತಿ ನೋಡುವುದೂ ಇಲ್ಲ ಎಂದ. ಅದನ್ನು ಶೀನಣ್ಣನಿಗೆ ದಾನ ಮಾಡಿಬಿಟ್ಟ. ಎರಡು ದಿನದ ಅನಂತರ ಊರಿಗೆ ಬಂದ. ಇದಾದ ಒಂದು ವಾರಕ್ಕೆ ಶೀನಣ್ಣನಿಗೆ ಒಂದು ಕಾಗದ ಬಂತು.

ಎಲೋ ನರ ಕುರಿ,

ಇದನ್ನು ಬರೆಯುವ ನಾನು ವಿಧಿ. ನಿನ್ನ ಮೇಲೆ ನನ್ನದೊಂದು ಮೊಶೆ. ಸೂರಪ್ಪನಿಗೆ ಸೈಕಲ್ ಹೇಳಿಕೊಡುವೆಯೋ? ಮೂರ್ಖ! ನಿನ್ನಂತಹ ಬಡಗನಾಡು ಬಕರನಿಗೆ ನಾನು ಜಗ್ಗುವುದಿಲ್ಲ.

ಇಂತು ನಿಮ್ಮಪ್ಪ,
ವಿಧಿ

REGISTERED No. BGW-180

Printed by V R NATH for the Publisher M SHIVA KUMAR, Published and owned by M SHIVA KUMAR, 36, 6th Main Road, Malleswaram, Bangalore–560 003 Printed at IMPRESSIONS, 404, Sampige Road, Malleswaram, Bangalore–560 003 Editor. M SHIVA KUMAR